WHITE PAPER ON THE SHARAVATHI VALLEY PROJECT

Motion to Consider

Sri S. NIJALINGAPPA.—Sir, I beg to move :

" That the White Paper on the Sharavathi Valley Project be taken into consideration. "

Mr. SPEAKER.—Motion moved:

" That the White Paper on the Sharavathi Valley Project be taken into consideration. "

Before I call upon anybody to participate in the debate. I would very much like to know whether the Whips have co-ordinated the work; and prepared a list? Otherwise, there is going to be confusion. I will invite them to my chambers. If no body gives the list, I will take up the matter myself.

† ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಆ ಶರಾವತೀ ವ್ಯಾಲಿಯಲ್ಲಿ ನಡೆಯತಕ್ಕ ಕೆಲಸಕಾರ್ಯಗಳ ಬಗ್ಗೆ ಇಂದು ಇಲ್ಲ ಚರ್ಚೆಗೆ ಒಂದು ಶ್ವೇತಪತ್ರವನ್ನು ಮಂಡಿಸಿದ್ದಾರೆ. ಈ ಶರಾವತಿ ವ್ಯಾಲಿ ಕಾಂಗಾರಿಯ ವಿಷಯ ನಮ್ಮ ದೇಶದಲ್ಲಿ ಬಹಳ ಕುತೂಹಲವನ್ನೂ ಹಾಗೂ ಕೋಲಾಹಲವನ್ನೂ ಎಬ್ಬಿಸಿದೆ. ಈ ಒಂದು ವಿದ್ಯುತ್‌ಕೇಂದ್ರ ನಮ್ಮ ಮೈಸೂರು ದೇಶ ಒಂದರಲ್ಲೇ ಅಲ್ಲ ಇಡೀ ಭರತಖಂಡದಲ್ಲೇ ಇಂಥ ಒಂದು ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸತಕ್ಕ ವಿದ್ಯುತ್‌ಕೇಂದ್ರ ಅಂದರೆ ಸುಮಾರು 10 ಲಕ್ಷ ಕಿಲೋ ವ್ಯಾಟ್ಸ್ ಪವರನ್ನು ತಯಾರಿಸತಕ್ಕಂಥ ಕೇಂದ್ರ ಮತ್ತೊಂದಿಲ್ಲ. ಇಲ್ಲ ವಿದ್ಯುಚ್ಛಕ್ತಿಯ ತಯಾರಿಕೆಗಾಗಿ 110—120 ಕೋಟಿ ರೂಪಾಯಿಗಳವರೆಗೂ ಖರ್ಚುಮಾಡಲು ಇದೊಂದು ಯೋಗ್ಯವಾದ ಕೇಂದ್ರವಾಗಿದೆ. ಇಂಥಾ ಒಂದು ವಿದ್ಯುಚ್ಛಕ್ತಿಯ ಉತ್ಪಾದನಾ ಕೇಂದ್ರ ಇಲ್ಲಿಯತನಕ ಯಾವ ರೀತಿ ಅಲ್ಲಿ ತನ್ನ ಕಾಂಗಾರಿಗಳನ್ನು ನಡೆಸಿಕೊಂಡು ಬಂದಿವೆ ಎಂಬುದನ್ನು ಸೂಕ್ಷ್ಮವಾಗಿ ಈ ಶ್ವೇತಪತ್ರ ತಿಳಿಸತಕ್ಕದಾಗಿದೆ. ಇದು ಇಲ್ಲಿ ಹೇಳಿರುವಂತೆ, ಶರಾವತಿ ವ್ಯಾಲಿಯಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳನ್ನು ಸೂಕ್ಷ್ಮವಾಗಿ ಮೂರು ವಿಭಾಗಮಾಡಬಹುದಾಗಿದೆ. (1) ಶರಾವತೀ ನದಿಗೆ ಅಡ್ಡಲಾಗಿ ಕಟ್ಟುತ್ತಿರುವ ಲಿಂಗನಮಕ್ಕಿ ದೊಡ್ಡ ಸ್ಟೋರೇಜ್ ರಿಜರ್ವಾಯರ್, ಅನಂತರ (2) ಬ್ಯಾಲೆನ್ಸಿಂಗ್ ಡ್ಯಾಂ ಆದ ತಳಗಳಲೇ ಡ್ಯಾಂ, ಅನಂತರ (3) ವಿದ್ಯುಚ್ಛಕ್ತಿಯನ್ನು ತಯಾರಿಸತಕ್ಕ ಪವರ್ ಹೌಸ್. ಈ ಇಡೀ ಯೋಜನೆಯಲ್ಲಿ, ಲಿಂಗನಮಕ್ಕಿ ಡ್ಯಾಂನಲ್ಲಿ 156 ಟಿ. ಎಂ. ಸಿ. ಎಫ್ ಟಿ. ನೀರನ್ನು ಶೇಖರಿಸಿ ಸರಬರಾಯಿ ಮಾಡುತ್ತದೆ. ಇದು ನೀರಿನ ಸರಬರಾಯಿಯ ವಿಚಾರದಲ್ಲಿ ತುಂಗಭದ್ರಾ ನದಿಯ ಒಂದೂವರೆಯಷ್ಟು ದೊಡ್ಡದು ಅಥವಾ ಭದ್ರಾ ರಿಜರ್ವಾಯರಿನ ಎರಡರಷ್ಟು ಅಥವಾ ಕೃಷ್ಣರಾಜ ಸಾಗರದ ಮೂರೂವರೆಯಷ್ಟು ದೊಡ್ಡದೆಂದು ಹೇಳಬಹುದು. ಇಂಥಾ ಒಂದು ವಿದ್ಯುತ್‌ಕೇಂದ್ರ ಮೈಸೂರಿಗೆ ಪ್ರಕೃತಿಮಾತೆಯಿಂದ ದೊರೆತ ಒಂದು ವರಪ್ರಸಾದವೆಂದು ಹೇಳಬಹುದು. ಇಂಥ ಪ್ರಶಸ್ತವಾದ ಸ್ಥಳ, ರಮ್ಯವಾದ ಸ್ಥಳ ಭಾರತದಲ್ಲೇ ಇನ್ನೆಲ್ಲಿಯೂ ಇಲ್ಲವೆಂದು ಹೇಳಬಹುದು. ಇಂಥಾ ಒಂದು ಪುಣ್ಯಸ್ಥಳದಲ್ಲಿ ಜನ್ಮ ತಾಳಿರತಕ್ಕ ಈ ಶರಾವತಿ ವ್ಯಾಲಿಯ ಕೆಲಸಕಾರ್ಯಗಳು ಹೇಗೆ ಜರುಗುತ್ತಿವೆ; ಅವು ಎಷ್ಟು ಅಪವಿತ್ರವಾಗಿವೆ ಎಂಬುದನ್ನು ಎತ್ತಿ ತೋರಿಸತಕ್ಕದ್ದೇ ಇಂದಿನ ಚರ್ಚೆಯ ಒಂದು ಮುಖ್ಯ ಅಂಗವಾಗಿದೆ. ಸರ್ಕಾರದವರು ಹೊರಡಿಸಿರತಕ್ಕ ಈ ಶ್ವೇತಪತ್ರದಲ್ಲಿ ಇದರ ಸ್ಥಾಪನೆ ಹೇಗೆ ಅಲ್ಲಾಯಿತು, ಅದು ಇಲ್ಲಿಯತನಕ ಯಾವರೀತಿ ಬೆಳೆಯುತ್ತಾ ಬಂದಿವೆ ಎಂಬ ವಿಚಾರವನ್ನೆಲ್ಲಾ ಸೂಕ್ಷ್ಮವಾಗಿ ತಿಳಿಸುತ್ತಿದೆ. ಈ ಹಿಂದೆ 1959ರಲ್ಲಿ ಈ ವಿದ್ಯುಚ್ಛಕ್ತಿ ಕಾಂಗಾರಿಯನ್ನು ಸ್ಥಾಪನೆಮಾಡತಕ್ಕ ಕಾಲದಲ್ಲಿದ್ದ ಆಗಿನ ಲೋಕೋಪಯೋಗಿ ಶಾಖೆಯ ಮಾಜೀ ಸಚಿವರು ಈ ಕಾರ್ಯಕಲಾಪಗಳೆಲ್ಲಾ ಹೆಚ್ಚಿನ ವೇಗದಲ್ಲಾಗಬೇಕೆಂದೂ, ಆಗ ದೇಶದಲ್ಲಿದ್ದ ವಿದ್ಯುತ್ ಅಭಾವವನ್ನು ಆದಷ್ಟು ಬೇಗ ಪರಿಹಾರ ಮಾಡಬೇಕೆಂದೂ, ಆದಷ್ಟೂ ಸುಲಭ ದರದಲ್ಲಿ ಈ ಕಾರ್ಯವನ್ನು ಮುಗಿಸಬೇಕೆಂದೂ. 1959ನೇ ಡಿಶಂಬರ್ ಅಂತ್ಯದೊಳಗಾಗಿ ಪವರನ್ನು ಎಲ್ಲಾ ಕೈಗಾರಿಕೆಗಳಿಗೂ ಒದಗುವಂತೆ ಮಾಡಬೇಕೆಂದೂ, ಈ ಕಾರ್ಯವನ್ನು ನಡೆಸಲು ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ಕರೆಸಿಕೊಂಡು, ಆಗ್ಗೆ ಸರ್ಕಾರದವರೇ ಇಂಥ ದೊಡ್ಡ ದೊಡ್ಡ ಕಾಂಗಾರಿಗಳನ್ನು ನಡೆಸುತ್ತಿದ್ದಾಗ್ಗೂ, ಇದನ್ನು ಅವರು ಕೈಗೊಳ್ಳದೆ,

ಸರ್ಕಾರ ಇದರಲ್ಲಿ ಕೈಹಾಕಿದರೆ ಇದು ನಿಧಾನವಾಗಬಹುದೆಂದು ಆಲೋಚಿಸಿ, ಒಂದು ರೇಟನ್ನು ನಿಗದಿಮಾಡಿ ಈ ಕಾರ್ಯವನ್ನು ಅಂದು ದೊಡ್ಡ ದೊಡ್ಡ ಕಂಟ್ರಾಕ್ಟರರಿಗೆ ವಹಿಸಿದ ಸಂಗತಿ ಈ ಸಭೆಗೆ ತಿಳಿದಿರತಕ್ಕದ್ದೇ ಆಗಿದೆ. ಆ ಕಂಟ್ರಾಕ್ಟರಿಗೆ ಪವರನ್ನೊದಗಿಸತಕ್ಕ ಶಕ್ತಿ ಅಂದರೆ 1962ನೇ ಡಿಶೆಂಬರ್ ಅಂತ್ಯದೊಳಗೆ ಈ ಕಾರ್ಯವನ್ನು ಪೂರ್ತಿಮಾಡತಕ್ಕ ಶಕ್ತಿ ಅವರಿಗಿದೆಯೆಂದು ಹೇಳಿದ್ದರು. ಅಂದು ನಮ್ಮೆಲ್ಲರಿಗೂ ಆ ಕಾರ್ಯ ಆದಷ್ಟು ಜಾಗ್ರತೆಯೇ ಆಗಬಹುದೆಂಬ ಆಸೆಯೂ ಇತ್ತು. ಆದರೆ ಆ ಕಾರ್ಯ ಅಲ್ಲಿ ಆರಂಭವಾದನಂತರ ಅಲ್ಲಿ ತಲೆದೋರಿದ ಕೆಲವು ಸಮಸ್ಯೆಗಳ ಬಗ್ಗೆ ಸರ್ಕಾರದವರು ತಾಳಿದ ಒಂದು ನೀತಿಯಫಲವಾಗಿ, ಅಂದರೆ, ಇವರ ನೀತಿಯು ಅದಲುಬದಲಾದ್ದರಿಂದ ಅದೆಷ್ಟರ ಮಟ್ಟಿಗೆ ಫಲಕಾರಿಯಾಯಿತೆಂಬುದನ್ನು ನಾವಿಂದು ಕಾಣುತ್ತಿದ್ದೇವೆ.

ಇನ್ನೂ ಪ್ರಾರಂಭದಲ್ಲೇ ಆ ಲಿಂಗನಮಕ್ಕಿ ಡ್ಯಾಂನ್ನು ಕಟ್ಟತಕ್ಕ ಕಾಲದಲ್ಲಿ ಸರ್ಕಾರದವರೇನು ಅದರ ಬಗ್ಗೆ ಒಂದು ಪ್ಲಾನನ್ನು ಮಾಡಿದ್ದರೋ ಅದನ್ನು ಅವರು ಸ್ವಲ್ಪ ಆತುರಾತುರವಾಗೇ ಮಾಡಿದ್ದರೆಂಬ ವಿಷಯವನ್ನು ಈ ಶ್ವೇತಪತ್ರದ ಪುಟ 32—33ರಲ್ಲಿ ತಿಳಿಸಲಾಗಿದೆ. ಈ ಕೆಲಸವನ್ನು ಆತುರಾತುರವಾಗಿ ಮಾಡಿದ್ದಾರೆ. ಯಾವ ರೀತಿ ಪ್ಲಾನ್ ಮಾಡಬೇಕೋ ಮತ್ತು ಯಾವ ರೀತಿ ಅಂಕಿ ಅಂಶಗಳನ್ನು ಶೇಖರಿಸಬೇಕೋ ಅಂಥಾದ್ದನ್ನು ಶೇಖರಿಸಿಲ್ಲ. 1959ನೇ ಇಸವಿಯಲ್ಲಿ ಇದನ್ನು ಆತುರಾತುರವಾಗಿ ಮಾಡಿದ್ದಾರೆ. ಅಂದು ಸರ್ಕಾರಕ್ಕೆ ಮುಂದಾಲೋಚನೆ ಇರಲಿಲ್ಲವೋ ಎನ್ನುವುದು ಅವರ ಹೇಳಿಕೆಯಿಂದಲೇ ಗೊತ್ತಾಗುತ್ತದೆ. ಯಾವ ಅಂಕಿ ಅಂಶಗಳ ಆಧಾರವಿಲ್ಲದೆಯೇ ಆತುರಾತುರವಾಗಿ ಇಂತಹ ಒಂದು ದೊಡ್ಡ ಪ್ರಮಾಣದ ಕಾಮಗಾರಿಯನ್ನು ಅಂದು ಪ್ರಾರಂಭ ಮಾಡಿದ್ದಾರೆ. ಆದರೆ ಲಿಂಗನಮಕ್ಕಿ ಡ್ಯಾಮ್ ನೋಡಿ ಒಂದು ಮಾತನ್ನು ಪ್ರವೀಣರು ಹೇಳಿದರು. ಮೇಸನರಿ ಡ್ಯಾಮ್ ಈ ಕಟ್ಟಡಕ್ಕೆ ಸರಿಹೋಗುವುದಿಲ್ಲ. ಕೊನೆಯ ಭಾಗದಲ್ಲಿ ಈ ಮೇಸನರಿ ಡ್ಯಾಮ್ ಕಟ್ಟುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅಷ್ಟುಹೊತ್ತಿಗೆ ದಡ ಮತ್ತು ಏರಿ ಕಟ್ಟೆ ಎರಡನ್ನೂ ಕಟ್ಟಿದ್ದಾರೆ. ಅಲ್ಲಿಂದ ಮುಂದೆ ಇನ್ನೂ ಕಟ್ಟಡವಾಗಬೇಕು ; ಈ ಮಧ್ಯೆ ಈ ಒಂದು ಕಾರಣ ಬಂದು ಮೇಸನರಿ ಕಾಮಗಾರಿಯನ್ನು ತಾರಾಪೂರ್ ಕಂಪೆನಿಯವರಿಗೆ ಆಗಲೇ ವಹಿಸಿ ಕೊಟ್ಟಿದ್ದರು. ಇದನ್ನು ಕಟ್ಟತಕ್ಕ ಕಂಟ್ರಾಕ್ಟ್‌ದಾರರಿಗೆ ಪ್ಲಾನ್ ಬದಲಾಯಿತು. ಆಗ ಗಾರೆ ಕಟ್ಟಡ ಬೇಕಾಗಿಲ್ಲ, ಸಿಮೆಂಟ್ ಕಟ್ಟಡ ಅಲ್ಲಿ ಬರಬೇಕೆಂದು ಬದಲಾಯಿಸಿದರು. ಈ ಕಟ್ಟಡದ ಕೆಲಸವನ್ನು ಯಾರಿಗೆ ಕೊಡಬೇಕು, ಹೇಗೆ ಮಾಡಬೇಕು ಎಂಬುದು ಸರ್ಕಾರದ ಮುಂದೆ ಪರಿಶೀಲನೆಗೆ ಬಂದಿದೆ. ಆ ಗಾರೆ ಕಟ್ಟಡದ ಕೆಲಸವನ್ನು ಮತ್ತು ಇದರ ಏರಿ ಕೆಲಸವನ್ನು ಮಾಡತಕ್ಕ ಕಂಟ್ರಾಕ್ಟ್‌ದಾರರೊಡನೆ ನೆಗೋಷಿಯೇಟ್ ಮಾಡಿ, ಈ ಕಟ್ಟಡದ ಕೆಲಸವನ್ನು ಯಾರಿಗೆ ಕೊಡಬೇಕು ಎಂಬುದಾಗಿ ಯೋಚನೆ ಮಾಡಿದಾಗ್ಗೆ ಆಗ ತಾರಾಪೂರ್ ಕಂಪೆನಿಯವರನ್ನೇ ಕರೆದು ಕೇಳಿದ್ದಾರೆ. ಅವರಿಗೆ ಇವರು ಮಣ್ಣಿನ ಕೆಲಸವನ್ನು ನೀವೇ ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಇದು ಸಬ್‌ಸ್ಟಿಟ್ಯೂಟೆಡ್ ವರ್ಕ್ ಎಂದು ಸಹ ಹೇಳಿದ್ದಾರೆ. ಇದನ್ನು ಯಾವ ಅಗ್ರೀಮೆಂಟ್ ಪ್ರಕಾರ ಅವರು ಒಪ್ಪಿಕೊಂಡು ಇವತ್ತು ಆ ಕೆಲಸವನ್ನು ಗಾರೆ ಮತ್ತು ಮಣ್ಣಿನ ಕೆಲಸಕ್ಕೆ ಮಾರ್ಪಾಡು ಮಾಡಿದ ಮೇಲೂ ಕೂಡ ಅಲ್ಲಿ ಯಾವ್ಯಾವ ಕೆಲಸಗಳನ್ನು ಮಾಡಬೇಕಾಗಿತ್ತೋ ಆ ರೀತಿಯಲ್ಲಿ ಅವನ್ನು ಮಾಡಲಿಲ್ಲ. ಆಗಲೇ ಇವರು ಈ ಕಟ್ಟಡದ ಕೆಲಸವನ್ನು ಕಡ್ಡಾಯವಾಗಿ ನಿಲ್ಲಿಸಿ ರೀ-ಟೆಂಡರನ್ನು ಕಾಲ್‌ಫಾರ್ ಮಾಡಿಸಿದ್ದರೆ ಅಂದಿಗೆ ಈ ನ್ಯಾಯಾಲಯಕ್ಕೆ ಹೋಗುವ ಅವಕಾಶವಿರುತ್ತಿರಲಿಲ್ಲ.

ಇವತ್ತು ಸರ್ಕಾರದವರು ಕಣ್ಣುಮುಚ್ಚಿಕೊಂಡು ಕೂತು ಆ ಕಟ್ಟಡದ ಕೆಲಸವನ್ನು ಗಾರೆ ಕೆಲಸದಿಂದ ಮಣ್ಣಿಗೆ ಬದಲಾಯಿಸಿದಮೇಲೂ ಅದೇ ಕಂಟ್ರಾಕ್ಟ್‌ದಾರರಿಗೆ ಈ ಕೆಲಸ ಜಾಗ್ರತೆಯಾಗ ಬೇಕಾಗಿದೆ ಎಂಬ ಒಂದು ನೀತಿಯಿಂದ ಪುನಃ ಕೊಡುವ ಪ್ರಮೇಯವೇನಿತ್ತೆಂದು ನಾನು ಕೇಳುತ್ತೇನೆ. ಈ ರೀತಿಯಾಗಿ ಒಂದು ದೊಡ್ಡ ಅನ್ಯಾಯಮಾಡಿದ್ದಾರೆ. ಅವತ್ತು ಗಾರೆ ಕಟ್ಟಡವನ್ನು ಮಣ್ಣಿನ ಕಟ್ಟಡಕ್ಕೆ ಬದಲಾಯಿಸಿದ್ದರೂ ಇವತ್ತು ಗಾರೆ ಕೆಲಸವನ್ನು ಒಬ್ಬರಿಗೆ ಕೊಟ್ಟು ಮಣ್ಣಿನ ಕೆಲಸವನ್ನು ಬೇರೆಯವರಿಗೆ ವಹಿಸಿದ್ದರೆ ಈ ತಕರಾರು ಬರುತ್ತಿರಲಿಲ್ಲ. ಈಗಲೂ ಅದೇ ಕಂಟ್ರಾಕ್ಟ್‌ದಾರರಿಗೆ ಈ ಕೆಲಸಮಾಡಿ ಎಂದು ಹೇಳಿದ್ದಾರೆ. ಅದನ್ನು ಯಾವ ರೇಟಿಗೆ ಕೊಡೋಣವೆಂಬುದನ್ನು ಮುಂದೆ ಯೋಚನೆ ಮಾಡೋಣವೆಂದು ಹೇಳಿ ಅವರಿಗೇ ಆ ಕೆಲಸವನ್ನು ವಹಿಸಿಕೊಟ್ಟು ಅಪರಾಧ ಮಾಡಿದ್ದಾರೆ. ಕಂಟ್ರಾಕ್ಟ್‌ದಾರರಿಗೂ ಇದು ಒಂದು ಅವಕಾಶ ಸಿಕ್ಕಿತು. ಮಣ್ಣಿನ ದರ ಯಾವ ರೀತಿ ನಿರ್ಧಾರ ಮಾಡಬೇಕೆಂಬ ಬಗ್ಗೆ ಚರ್ಚೆ ನಡೆಯಿತು. ಅವರು ನನಗೆ 275 ರೂಪಾಯಿಗಳನ್ನು ಕೊಡಿ ಎಂದು ಕೇಳಿದರು. ಆದರೆ ನಾನು ಕೇಳಿದ ಪ್ರಕಾರ ಸುತ್ತುಮುತ್ತಲೂ 175 ರೂಪಾಯಿಗಳ ದರ ಇದೆ. ಅವತ್ತು ಆ ಕಂಟ್ರಾಕ್ಟ್‌ದಾರರಿಗೆ ಸರ್ಕಾರದವರು ರೀ-ಟೆಂಡರ್ ಕರೆಯದೆಯೇ ಈ ಕೆಲಸವನ್ನು ವಹಿಸಿದ್ದರು. ಅದೂ ಅಲ್ಲದೆ ಸರ್ಕಾರದವರು ತಾರಾಪೂರ್ ಕಂಪೆನಿಯವರನ್ನು ನೀವು ರೇಟ್ ಕೊಡಿ, ನಿಮ್ಮ ರೇಟ್ ಏನಿದೆಯೋ ಅದನ್ನು ಇಂಟಿಮೇಟ್ ಮಾಡಿ ಎಂದು ಅವರಿಗೆ ಈ ಕೆಲಸ

(ಶ್ರೀ ಎಸ್. ಶಿವಪ್ಪ)

ಕೊಟ್ಟರು. ಅವರು ಮೊದಲೇ ಕಂಟ್ರಾಕ್ಟುದಾರರು. ಸರ್ಕಾರದವರು ತುಂಬಾ ಅವಸರದಲ್ಲಿದ್ದಾರೆ, ನಾನು ಒಬ್ಬನೇ ಇವರಿಗೆ ಗತಿ ಎಂಬ ಭಾವನೆಪಟ್ಟು ಅವರು 275 ರೂಪಾಯಿಗಳನ್ನು ಕೊಡಬೇಕೆಂದು ಕೇಳಿದರು. ಅದನ್ನು ಸರ್ಕಾರದವರು ಒಪ್ಪಲಿಲ್ಲ. ಅದಕ್ಕಾಗಿ ಸರ್ಕಾರದವರು ಒಂದು ಕಮಿಟಿಯನ್ನು ರಚನೆಮಾಡಿದ್ದಾರೆ. ಎಲ್ಲೆಲ್ಲಿ ಇಂತಹ ಕಾಮಗಾರಿಗಳು ನಡೆಯುತ್ತವೆಯೋ ಅಲ್ಲೆಲ್ಲಾ ಮಾಡಿದ್ದಾರೆ. ನಾಗಾರ್ಜುನಸಾಗರದಲ್ಲಿಯೂ ಇಂತಹ ಕಾಮಗಾರಿ ನಡೆದಿದೆ. ಆ ಕಡೆಯೂ ಸರ್ಕಾರದ ಒಂದು ಘೋರಣೆಯನ್ನು ನಾನು ನೋಡಿಕೊಂಡು ಬಂದಿದ್ದೇನೆ. ಕೊನೆಗೆ ಇಲಾಖೆಯವರೂ ಸಹ ಅಲ್ಲಿನ ಮಣ್ಣಿನ ಕೆಲಸವನ್ನು ಮಾಡಿದ್ದಾರೆ. ಅವರು ಒಂದು ಅಂಕಿ ಅಂಶದ ಆಧಾರದ ಮೇಲೆ ಒಂದು ಸಾವಿರ ಸಿ. ಎಫ್ಟಿಗೆ 200 ರೂಪಾಯಿಗಳ ದರ ಸಾಕು, ಕೊಡಬಹುದು ಎಂದು ಹೇಳಿ ತೀರ್ಮಾನಮಾಡಿ 216 ರೂಪಾಯಿಗಳಿಗೆ ಒಪ್ಪಬೇಕು ಎಂದು ಚೌಕಾಸಿ ಮಾಡಿ ಸರ್ಕಾರದವರು ಮತ್ತು ಕಂಟ್ರಾಕ್ಟುದಾರರು ಇಬ್ಬರೂ ಸೇರಿ 216 ರೂಪಾಯಿಗಳಿಗೆ ಒಪ್ಪಿದ್ದೇವೆಂದು ಕಾಗದ ಬರೆದಿದ್ದಾರೆ. ಒಂದು ವಾರದಲ್ಲಿ ಕಾಗದ ಬರೆದಿದ್ದಾರೆ, ಈ 200 ರೂಪಾಯಿಗಳು ಆಖೈರು ಅಲ್ಲ. ಇದನ್ನು ಹೆಚ್ಚಿಗೆ ಕೇಳುವ ಅವಕಾಶ ಬರಬಹುದು. ಧಾರಣೆ ಮುಂದೆ ಜಾಸ್ತಿಯಾಗಬಹುದು ಎಂಬುದಾಗಿ ಸರ್ಕಾರಕ್ಕೆ ಕಾಗದ ಬರೆಯುತ್ತಿದ್ದಾರೆ. 1960ನೇ ಫೆಬ್ರವರಿ 6ನೇ ತಾರೀಖಿನಲ್ಲಿ 216.62 ನಯಾ ಪೈಸೆ ದರವನ್ನು ಇಬ್ಬರೂ ಆಗಬಹುದು ಎಂದು ಒಪ್ಪಿಕೊಂಡಿರುತ್ತಾರೆ. ಅದೇ ಕಂಪೆನಿಯವರು 20ನೇ ತಾರೀಖು ಮತ್ತೆ ಕ್ಲೇಮ್ ಮಾಡುವ ಹಕ್ಕನ್ನು ಇಟ್ಟುಕೊಳ್ಳುತ್ತಾ, ಇದೇನು ಆಖೈರು ಒಪ್ಪಂದವಲ್ಲವೆಂದು ಪುನಃ ಸರ್ಕಾರಕ್ಕೆ ಆ ಕಂಪೆನಿಯವರು ಬರೆಯುತ್ತಿದ್ದಾರೆ. ಇವರು ಯಾವ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೂ ಬಾರದೆ ಹಣ ಪೋಲಾಗುವ ರೀತಿಯಿಂದ ಆ ಕಂಪೆನಿಯವರಿಗೆ ಮಣ್ಣಿನ ಕಾಮಗಾರಿಯನ್ನು ವಹಿಸಿದ್ದರಿಂದ ನಮ್ಮ ಸರ್ಕಾರಕ್ಕೆ ಎಷ್ಟು ಲುಕ್ಸಾನಾಗಿದೆಯೆಂಬುದನ್ನು ತಿಳಿಯಬೇಕು. ಇನ್ನು ಇದು ಆರ್ಬಿಟ್ರೇಷನ್ನಿಗೆ ಹೋಗುತ್ತದೆ, ನ್ಯಾಯಾಲಯಕ್ಕೆ ಹೋಗುತ್ತದೆಂದು ಹೇಳಿದ್ದಾರೆ. ಅಲ್ಲಿ ಇಬ್ಬರೂ ಒಪ್ಪದೇ ಹೋದರೆ ಒಂದು ಟ್ರಿಬ್ಯೂನಲ್ಲನ್ನು ಏರ್ಪಾಡುಮಾಡುವ ಅವಕಾಶವನ್ನು ಇಲ್ಲಿ ಕಲ್ಪನೆಮಾಡಿಕೊಂಡಿದ್ದರು. ಈ ಟ್ರಿಬ್ಯೂನಲ್ ಒಂದು ಅವಾರ್ಡ್ ಕೊಡುವ ಅವಕಾಶವನ್ನು ಒಪ್ಪಿಕೊಂಡಿದ್ದೇ ಒಂದು ದೊಡ್ಡ ತಪ್ಪು ಎಂಬುದಾಗಿ ನಾನು ಹೇಳಬೇಕಾಗುತ್ತವೆ. ಕಂಟ್ರಾಕ್ಟುದಾರರಿಗೆ ಟೆಂಡರ್ ಕರೆದು ರೇಟನ್ನು ನಿಗದಿಮಾಡಿ ಕಳುಹಿಸಿದ ಮೇಲೆ ಪುನಃ ರೇಟ್ ತಪ್ಪಾಗಿದೆ, ನನಗೆ ಹೆಚ್ಚುಮಾಡಿ ಕೊಡಬೇಕು ಎಂದು ಕೇಳಿದಾಗ ಅದನ್ನು ಒಂದು ಟ್ರಿಬ್ಯೂನಲ್‌ಗೆ ಕೊಡಲು ಒಪ್ಪಿಕೊಂಡದ್ದು ಎಷ್ಟೋ ಅನ್ಯಾಯಮಾಡಿದ ಹಾಗಾಯಿತು ಎಂದು ನಾನು ಹೇಳುತ್ತೇನೆ. ಈ ರೀತಿ ಮಾಡಿದ್ದರಿಂದ ರೇಟ್ ಕಮ್ಮಿ, ಜಾಸ್ತಿ ಕೊಡಿ ಎಂದು ಇವರೇ ಅವನಿಗೆ ಕಲ್ಪನೆಮಾಡಿದ ಹಾಗಾಗುತ್ತದೆ. ಇದೇ ರೀತಿಯಲ್ಲಿ ಮಣ್ಣಿನ ಧಾರಣೆಯನ್ನು ಜಾಸ್ತಿಮಾಡಿಕೊಡಬೇಕು ಎಂಬುದಾಗಿ ಟ್ರಿಬ್ಯೂನಲ್‌ಗೆ ಅವರು ಅರ್ಜಿ ಹಾಕಿದಾಗ 200 ರೂಪಾಯಿಗಳು ಸರ್ಕಾರದ್ದು, ನಂತರ 216 ರೂಪಾಯಿಗಳೆಂದು ಮಧ್ಯಮ ತೀರ್ಪು—ಇವೆರಡೂ ಹೋಯಿತು. ಆಮೇಲೆ 245 ರೂಪಾಯಿಗಳನ್ನು ಕೊಡಬಹುದು ಎಂಬುದಾಗಿ ಟ್ರಿಬ್ಯೂನಲ್‌ನಲ್ಲಿ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಇದೊಂದು ಬಾಬಿನಲ್ಲಿ ಯಾವ ಸರ್ಕಾರವೇ ಆಗಲೀ ತಾನೇ ಕೆಲಸವನ್ನು ನಡೆಸಿ ನಿಖರವಾದ ಧಾರಣೆ ಎಂದು 200 ರೂಪಾಯಿಗಳನ್ನು ಕೊಟ್ಟಿದ್ದರೂ ಅದೂ ಕೂಡ ಜಾಸ್ತಿಯೆಂದು ಹೇಳಿದರೂ ಅದಗಲ್ಲಿ ಒಂದು ನ್ಯಾಯವಿದೆಯೆಂದು ಹೇಳಬಹುದಾಗಿತ್ತು. ಅದನ್ನೂ ಮೀರಿ ನೂರು ಸಿ. ಎಫ್‌ಟಿ.ಗೆ 240 ರೂಪಾಯಿಗಳೆಂದು ನಿಗದಿಮಾಡಿ ಮತ್ತೆ 50 ರೂಪಾಯಿಗಳನ್ನು ಜಾಸ್ತಿ ಕೊಟ್ಟಿರುವುದರಿಂದ 50 ಲಕ್ಷ ರೂಪಾಯಿ ನಷ್ಟವಾಯಿತು. ಇದನ್ನು ಕಂಡಂತೆ ನಾವು ಇವತ್ತಿನ ದಿವಸ ಆ ಕಂಪೆನಿಯವರಿಗೆ ಕೊಟ್ಟಿದ್ದೇವೆ. ಇದು ಯಾವ ಒಂದು ನ್ಯಾಯವಾದ ಆಧಾರದ ಮೇಲೆ ಸರ್ಕಾರ ಯಾವ ವಿಚಕ್ಷಣೆಯ ಮೇಲೆ ಈ ರೀತಿ ಕೊಟ್ಟಿದೆಯೆಂದು ನಾನು ಹೇಳಬೇಕಾಗಿದೆ. ಇಷ್ಟು ಮಣ್ಣಿನ ಕಾಮಗಾರಿ ವಿಷಯವಾಯಿತು. ಇನ್ನು ಲಿಂಗನಮಕ್ಕಿ ಡ್ಯಾಂನಲ್ಲಿ ಗಾರೆ ಕಟ್ಟಡದ ಕೆಲಸದ ವಿಷಯವಾಗಿ ನಮೂದುಮಾಡಿದ್ದಾರೆ. ಇದನ್ನು ಯಾವ ರೀತಿ ಮಾಡಬೇಕು ಎಂಬುದನ್ನು ಸೆಂಟ್ರಲ್ ಇರ್ರಿಗೇಷನ್ ಪ್ಲಾನಿಂಗ್ ಕಮಿಷನ್ನಿನವರು ಪರೀಕ್ಷಮಾಡಿದ್ದಾರೆ. ಆಗಲೇ ಇಷ್ಟು ಸಾವಿರ ಚದರಡಿ ಬೇಕೆಂದು ನಿರ್ಧಾರವಾಗಿದೆ. ಅಲ್ಲದೆ ಈ ರಾಕ್‌ಫಿಲ್ಲನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ಒಂದು ತೀರ್ಪನ್ನು ಕೊಟ್ಟು ಅದನ್ನು ತಜ್ಞರು ಒಪ್ಪಿಕೊಂಡಿದ್ದಾರೆ, ತಜ್ಞರ ಒಂದು ಅಭಿಪ್ರಾಯದ ಮೇಲೆ ಅದನ್ನು ಯಾರು ಆರಂಭಮಾಡಬೇಕೆಂಬ ಪ್ರಶ್ನೆ ಬಂದು. ಈ ಯೋಜನೆಯನ್ನು ಮಾಡುವುದಕ್ಕಿಂತ ಮುಂಚೆ ಮುಂದುಗಡೆ ರಾಕ್‌ಫಿಲ್ ಕೆಲಸದ ಬಗ್ಗೆಯೂ ಸಹ ಸರ್ಕಾರ ಮತ್ತು ಕಂಟ್ರಾಕ್ಟುದಾರರೂ ಸೇರಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದರು. ಕಲ್ಲಿನ ಕೆಲಸವನ್ನೂ ಸಹ ಆ ಕಂಟ್ರಾಕ್ಟರೇ ಮಾಡಬೇಕಾಗಿತ್ತು.

ಯಾವಾಗ ಅವರು ಒಪ್ಪಂದವನ್ನು ಮಾಡಿಕೊಂಡಿದ್ದರೋ ಆ ಪ್ರಕಾರ ಅವರು ಸ್ವಲ್ಪ ಕಡಿಮೆ ಕಲ್ಲುಗಳನ್ನು ಅಲ್ಲಿಗೆ ಜೋಡಿಸಬೇಕಾಗಿತ್ತು. ಕೆಲಸಗಳನ್ನು ಬದಲಾವಣೆ ಮಾಡಿದ್ದರಿಂದ ಅದಕ್ಕೆ ಹೆಚ್ಚಿನ ಕಲ್ಲುಗಳು ಬೇಕಾಗುತ್ತದೆ. ಆದ್ದರಿಂದ ಆ ಕೆಲಸವನ್ನು ನನ್ನ ಕೈಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಒಂದು ನೆಪವನ್ನು ತಂದೊಡ್ಡುತ್ತಾರ. ಈ ಮಧ್ಯ ಇದಕ್ಕೆ ಇಂಜಿನಿಯರುಗಳೂ ಕಾರಣ ಎಂದು ಹೇಳುತ್ತಾರೆ. ಮಣ್ಣಿನ ಕಾಮಗಾರಿಯನ್ನು ಯಾವ ಕಂಟ್ರಾಕ್ಟರಿಗೆ ಕೊಟ್ಟಿದ್ದರೋ ಅದೇ ಕಂಟ್ರಾಕ್ಟರಿಗೆ ಕಲ್ಲಿನ ಕೆಲಸವನ್ನು ಕೊಡುವುದರಿಂದ ಕೆಲಸ ಚೆನ್ನಾಗಿ ಆಗುವುದಿಲ್ಲ; ಅದಕ್ಕೋಸ್ಕರ ಕಲ್ಲಿನ ಕೆಲಸವನ್ನು ಬೇರೆ ಕಂಟ್ರಾಕ್ಟರಿಗೆ ಕೊಡಬೇಕು, ಅದಕ್ಕೆ ಬೇರೆ ಟೆಂಡರನ್ನು ಕರೆದು ಅದನ್ನು ಬೇರೆಯವರಿಗೆ ವಹಿಸಬೇಕು ಎಂದು ಹೇಳುತ್ತಾರೆ. ಸರ್ಕಾರ ಅಲ್ಲಿ ಒಂದು ತಪ್ಪನ್ನು ಮಾಡಿದೆ. ಸರ್ಕಾರದ ಯಾವ ಒಂದು ಅಗ್ರಿಮೆಂಟ್ ಪ್ರಕಾರ, ಕಲ್ಲಿನ ಕೆಲಸಗಳನ್ನು ಮಾಡಿಸುವುದಕ್ಕೆ ಒಂದು ರೇಟನ್ನು ಫಿಕ್ಸ್ ಮಾಡಿದ್ದರೋ ಅದರ ಪ್ರಕಾರ ಆ ಕೆಲಸಗಳನ್ನು ಮಾಡತಕ್ಕದ್ದು ಅವರ ಕರ್ತವ್ಯವಾಗಿತ್ತು. ಅದನ್ನು ಸರ್ಕಾರ ಆ ಕಂಟ್ರಾಕ್ಟರಿಗೆ ಹೇಳಬೇಕಾಗಿತ್ತು, ನೀವು ಅಗ್ರಿಮೆಂಟ್ ಪ್ರಕಾರ ಏನು ಕೆಲಸವನ್ನು ಒಪ್ಪಿಕೊಂಡಿದ್ದಿರೋ ಅದನ್ನು ನೀವು ಕಡ್ಡಾಯವಾಗಿ ಮಾಡಲೇ ಬೇಕು ಎಂದು ಆ ಕಂಟ್ರಾಕ್ಟದಾರರಿಗೆ ಹೇಳಬೇಕಾಗಿತ್ತು. ಆದರೆ ಆರೀತಿ ಹೇಳಲಿಲ್ಲ. ಆಗ ಕಂಟ್ರಾಕ್ಟದಾರರೂ ನನಗೆ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಒಂದು ಕುಂಟು ನೆಪವನ್ನು ತಂದೊಡ್ಡಿ ನನಗೆ ಜಾಸ್ತಿ ರೇಟನ್ನು ಕೊಡಬೇಕೆಂದು ಕೇಳುತ್ತಾರೆ. ಮೊದಲು ಕಲ್ಲಿನ ಕೆಲಸವನ್ನು ಮಾಡಿಸುವುದಕ್ಕೆ ಆ ಕಂಟ್ರಾಕ್ಟದಾರರು ಒಪ್ಪಿಕೊಂಡಿದ್ದು 100 ಘನ ಅಡಿ ಕಲ್ಲಿಗೆ 60 ರೂಪಾಯಿಗಳು. ಅವರು ಹೆಚ್ಚಿಗೆ ಕೊಡಬೇಕೆಂದು ಕೇಳಿದ್ದು 100 ಘನ ಅಡಿಗೆ 150 ರೂಪಾಯಿಗಳು. 60 ರೂಪಾಯಿಗಳಂತೆ, ಕೊಟ್ಟಿದ್ದ ರೇಟನ್ನು ಬದಲಾಯಿಸಿ 150 ರೂಪಾಯಿಗಳಂತೆ, ಎಂದರೆ 250 ಪರ್ಸೆಂಟ್, ಜಾಸ್ತಿಕೊಡಿ ಎಂದು ಕೇಳುತ್ತಾರೆ. ಈ ಮಧ್ಯೆ ಇಂಜಿನಿಯರುಗಳು ಮತ್ತು ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಒಂದು ಮಣ್ಣಿನ ಕಾಮಗಾರಿಯಲ್ಲಿ 50 ಲಕ್ಷ ರೂಪಾಯಿಗಳನ್ನು ಬಹಳ ಸುಲಭವಾಗಿ ತೆಗೆದುಕೊಂಡಿದ್ದಾರೆ, ಅದಕ್ಕೋಸ್ಕರ ಕಲ್ಲಿನ ಕಟ್ಟಡಕ್ಕೆ ಸ್ವಲ್ಪ ಹೆಚ್ಚಿನ ದರವನ್ನು ಕೊಟ್ಟರೆ ಅವರು ಆ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯ ಎನ್ನುವ ಒಂದು ವಾದವನ್ನು ಅವರು ಸರ್ಕಾರದ ಮುಂದೆ ಇಟ್ಟರು. ಆಗ ಸರ್ಕಾರದವರು ಏನುಮಾಡಿದರು ಎಂದರೆ ಈ ಮಣ್ಣಿನ ಏರಿಗೆ ಕಲ್ಲಿನ ಕಟ್ಟಡವನ್ನು ಕಟ್ಟಿಸುವುದಕ್ಕೋಸ್ಕರ ಟೆಂಡರ್ ಕಾಲ್ ಫಾರ್ ಮಾಡಿದರು. ಆಗ ಆ ಕೆಲಸಕ್ಕೆ 7 ಜನ ಕಂಟ್ರಾಕ್ಟರುಗಳು ಅರ್ಜಿಯನ್ನು ಹಾಕಿದ್ದರು. ಅವರು ಅರ್ಜಿಯಲ್ಲಿ ಹಾಕಿದ್ದ ದರಗಳಲ್ಲಿ ಬಹಳ ವ್ಯತ್ಯಾಸ ಇತ್ತು. ಒಬ್ಬ ಕಂಟ್ರಾಕ್ಟರು 80 ರೂಪಾಯಿಗಳನ್ನು ಹಾಕಿದ್ದರು, ಇನ್ನೊಬ್ಬರು 120 ರೂಪಾಯಿಗಳನ್ನು ಹಾಕಿದ್ದರು, ಮತ್ತೊಬ್ಬರು 150 ರೂಪಾಯಿಗಳನ್ನು ಹಾಕಿದ್ದರು, ನಾಲ್ಕನೆಯವರು 160 ರೂಪಾಯಿಗಳನ್ನು ಹಾಕಿದ್ದರು. ಯಾವುದಾದರೂ ಒಂದು ಕೆಲಸಕ್ಕೆ ಟೆಂಡರ್ ಕರೆದಾಗ ರೇಟುಗಳಲ್ಲಿ 10-20 ರೂಪಾಯಿಗಳ ವ್ಯತ್ಯಾಸ ಇರುವುದನ್ನು ನಾವು ನೋಡಿದ್ದೇವೆ. ಆದರೆ ಈ ಕೇಸಿನಲ್ಲಿ 100ಕ್ಕೆ 100 ರಷ್ಟು ವ್ಯತ್ಯಾಸವಿದೆ. ಮೊದಲು ರಾಕ್ ಫಿಲಿಂಗ್ ಕೆಲಸಕ್ಕೆ ಟೆಂಡರ್ ಕಾಲ್ ಫಾರ್ ಮಾಡಿದಾಗ ಷೆಡ್ಯೂಲ್ ರೇಟು 60 ರೂಪಾಯಿ ಇತ್ತು. ಆ ಕೆಲಸಕ್ಕೆ ಮೆಸರ್ಸ್. ತಾರಾಪುರ ಅಂಡ್ ಕಂಪೆನಿಯವರು ತಮ್ಮ ಟೆಂಡರಿನಲ್ಲಿ 120 ರೂಪಾಯಿಗಳ ರೇಟನ್ನು ಹಾಕಿದ್ದರು. ಮೆಸರ್ಸ್. ಹಜರತ್ ಅಂಡ್ ಕಂಪೆನಿಯವರು 100 ರೂಪಾಯಿಗಳ ರೇಟನ್ನು ಹಾಕಿದ್ದರು. ಮೆಸರ್ಸ್. ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಕಂಪೆನಿಯವರು 100 ರೂಪಾಯಿ, ಜೋರಯ್ಯ ಬಸವಯ್ಯನವರು 140 ರೂಪಾಯಿ, ಮೆಸರ್ಸ್ ಗನಾನ್ ಅಂಡ್ ಕಂಪೆನಿಯವರು 160 ರೂಪಾಯಿಗಳನ್ನು ಹಾಕಿದ್ದರು. ಎಂ. ಎಸ್. ರಾಮಯ್ಯನವರು 80 ರೂಪಾಯಿಗಳ ರೇಟನ್ನು ಹಾಕಿದ್ದರು. ಆ ರೇಟುಗಳಲ್ಲಿ ಸಿಕ್ಕಾಪಟ್ಟೆ ವ್ಯತ್ಯಾಸ ಇದೆ. 60 ರೂಪಾಯಿಗಳೆಲ್ಲಿ ? 160 ರೂಪಾಯಿಗಳೆಲ್ಲಿ ? ಒಂದಕ್ಕೆ ಎರಡರಷ್ಟು ಮೂರರಷ್ಟು ದರಗಳನ್ನು ಹಾಕಿದ್ದಾರೆ. ಇದರಿಂದ ರೀಟೆಂಡರ್ ಕೇಳಿದ ಕಂಟ್ರಾಕ್ಟದಾರರಿಗೆ ಒಂದು ಒಳ್ಳೆಯ ಅವಕಾಶ ಸಿಕ್ಕಿತು. ಜೊತೆಗೆ ಸರ್ಕಾರದ ಅಧಿಕಾರಿಗಳೆಲ್ಲಾ ಆ ಕೆಲಸವನ್ನು ಚೆನ್ನಾಗಿ ಮಾಡಿಸಬೇಕೆಂದು ಉದ್ದೇಶವನ್ನು ಇಟ್ಟುಕೊಂಡರು ಎಂದು ಕಾಣುತ್ತದೆ. ಅದಕ್ಕೋಸ್ಕರ ಇದೇ ಸಮಯ ಎಂದು ಆ ಕೆಲಸಕ್ಕೆ ಜಾಸ್ತಿ ದುಡ್ಡನ್ನು ಹಾಕೋಣ ಎನ್ನುವ ಅಭಿಪ್ರಾಯ ಬಂತು. ಆಗ ಈ ಅಪ್‌ಸ್ಟ್ರೀಮ್ ರಾಕ್‌ಫಿಲಿಂಗ್ ಕೆಲಸಕ್ಕೆ ಟೆಂಡರ್ ಹಾಕಿದ್ದ 7 ಜನ ಕಂಟ್ರಾಕ್ಟರುಗಳ ಪೈಕಿ 3 ಜನ ಕಂಟ್ರಾಕ್ಟರುಗಳೊಡನೆ ನೆಗೋಷಿಯೇಟ್ ಮಾಡಿದರು. ಅದರಲ್ಲಿ ತಾರಾಪುರ್ ಅಂಡ್ ಕಂಪೆನಿಯವರಿಗೆ ಹೆಚ್ಚಿನ ದರದಲ್ಲಿ ಕೊಡುವ ಒಂದು ನೆಪದಲ್ಲಿ ಸರ್ಕಾರ ಎಷ್ಟು ಅನ್ಯಾಯ ವನ್ನು ಮಾಡಿದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಟೆಂಡರನ್ನು ಕರೆದು 7 ಜನ ಕಂಟ್ರಾಕ್ಟರುಗಳು ತಮ್ಮ ದರಗಳನ್ನು ಟೆಂಡರುಗಳ ಮುಖಾಂತರ ಸರ್ಕಾರಕ್ಕೆ ಕಳುಹಿಸಿಕೊಟ್ಟ ಮೇಲೆ ಆ ಟೆಂಡರುಗಳ ಪೈಕಿ ಯಾವುದು ಕಡಿಮೆ ದರ ಇದೆಯೋ ಅಂಥವರಿಗೆ ಮಾತ್ರ ಆ ಕೆಲಸವನ್ನು ಕೊಡಬೇಕಾಗಿತ್ತು. ಟೆಂಡರುಗಳನ್ನು ಕರೆಯುವ ಉದ್ದೇಶವಾದರೂ ಏನು ? ಯಾವ ಕಂಟ್ರಾಕ್ಟ್

(ಶ್ರೀ ಎಸ್. ಶಿವಪ್ಪ)

ದಾರನು ಕಡಿಮೆ ದರವನ್ನು ನಮೂದು ಮಾಡಿರುತ್ತಾನೆಯೋ ಅಂಥವರಿಗೆ ಮಾತ್ರ ಆ ಕೆಲಸವನ್ನು ಕೊಡಬೇಕು ಎಂಬುದೇ ಟೆಂಡರನ್ನು ಕರೆಯುವ ಉದ್ದೇಶ. ಆದರೆ ಆಗ ಇವರು ಏನು ಮಾಡಿದರು ಎಂದರೆ, ಆ 7 ಜನಗಳ ಪೈಕಿ 3 ಜನ ಕಂಟ್ರಾಕ್ಟರುಗಳನ್ನು ಕರೆದು ಸಂಧಾನದ ಮುಖಾಂತರ ಆ ಕಂಟ್ರಾಕ್ಟ್ ಕೆಲಸವನ್ನು ಕೊಡುವ ಒಂದು ತೀರ್ಮಾನಕ್ಕೆ ಬಂದರು. ಆದರೆ ಇದು ಟೆಂಡರ್ ಕರೆಯತಕ್ಕ ಪದ್ಧತಿಯೇ? ಕಂಟ್ರಾಕ್ಟ್ ಕೊಡತಕ್ಕ ಪದ್ಧತಿಯೇ? ಅಲ್ಲ ಅಶಾಸ್ತ್ರೀಯ ಪದ್ಧತಿ. ಆ 7 ಜನ ಕಂಟ್ರಾಕ್ಟರುಗಳಲ್ಲಿ ಜಾಸ್ತಿ ರೇಟುಗಳನ್ನು ಹಾಕಿದ್ದ ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ಇವರು ಕರೆಯಲಿಲ್ಲ. 3 ಜನಗಳನ್ನು ಮಾತ್ರ ಕರೆದರು. ಮೆಸರ್ಸ್ ಶಂಕರನಾರಾಯಣ ಮೆಸರ್ಸ್ ಹಜರತ್ ಅಂಡ್ ಕಂಪೆನಿ, ಮತ್ತು ಎಂ. ಎಸ್. ರಾಮಯ್ಯ ಇವರುಗಳಿಗೆ ಆ ಕೆಲಸವನ್ನು ಕೊಡಲು ಸಂಧಾನವನ್ನು ಮಾಡಿ ಒಂದು ಚೌಕಾಸಿ ಮಾಡುವುದಕ್ಕೆ ಪ್ರಯತ್ನ ಮಾಡಿದರು. 1 0 ಘನ ಅಡಿ ಕಲ್ಲಿನ ಕೆಲಸಕ್ಕೆ 60 ರೂಪಾಯಿಗಳು ಇಲಾಖೆಯವರು ಗೊತ್ತುಪಡಿಸಿದ್ದಾಗ ಅಧಿಕಾರಿಗಳು ಕಂಟ್ರಾಕ್ಟ್ ದಾರರೊಡನೆ ನಡೆಸಿದ ಸಂಧಾನದಲ್ಲಿ 100 ರೂಪಾಯಿ, 104 ರೂಪಾಯಿಗಳು ಮತ್ತು 110 ರೂಪಾಯಿಗಳವರೆಗೆ ದರವನ್ನು ಕೊಡಲು ಆ ಮೂರು ಜನ ಕಂಟ್ರಾಕ್ಟರುಗಳಿಗೆ ಆ ಕೆಲಸವನ್ನು ವಹಿಸಿ ಕೊಟ್ಟರು. 7 ಜನಗಳನ್ನು ಏತಕ್ಕೆ ಸಂಧಾನ ಮಾಡಲು ಕರೆಯಲಿಲ್ಲ. ಆ ಪೈಕಿ 4 ಜನಗಳನ್ನು ಬಿಟ್ಟು 3 ಜನಗಳನ್ನು ಮಾತ್ರ ಕರೆದು ಆ ಕೆಲಸವನ್ನು ಮಾಡಿ ಎಂದು ಅವರಿಗೆ ಅದನ್ನು ವಹಿಸಿರುತ್ತಾರೆ. ಇದರಲ್ಲಿ ಒಂದು ದೊಡ್ಡ ಅನ್ಯಾಯವನ್ನು ಮಾಡಿದ್ದಾರೆ. ಈ ಮೂವರು ಕಂಟ್ರಾಕ್ಟರುಗಳನ್ನು ಸಂಧಾನಕ್ಕೆ ಕರೆದು ಅವರಿಗೆ ಕಂಟ್ರಾಕ್ಟನ್ನು ವಹಿಸಿಕೊಟ್ಟಿದ್ದರ ಒಂದೇ ವ್ಯವಹಾರದಲ್ಲಿ ಸರ್ಕಾರಕ್ಕೆ 60 ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಬಹುದಾಗಿತ್ತು. ಇದರಲ್ಲಿ ಒಂದು ಅನ್ಯಾಯವನ್ನು ಮಾಡಿದ ಹಾಗಾಗಿದೆ. ಸರ್ಕಾರ ಏತಕ್ಕೋಸ್ಕರ ಈ ಒಂದು ರೇಟನ್ನು ಒಪ್ಪಿಕೊಂಡಿತು ? ಇದು ಬಹಳ ಶೋಚನೀಯವಾದ ರೀತಿಯಲ್ಲಿ ನಡೆದಿದೆ.

1-30 P.M.

ಇಲ್ಲಿ ಒಂದು ಅಚಾತುರ್ಯ ನಡೆದಿದೆ. ಯಾವ ಕೆಲಸ ಆಗಬೇಕಾಗಿದ್ದರೂ ಕೂಡ ಹೈಡ್ರೊ ಎಲೆಕ್ಟ್ರಿಕ್ ಕನ್‌ಸ್ಟ್ರಕ್ಷನ್ ಪ್ರಾಜೆಕ್ಟ್ ಬೋರ್ಡ್ ಮುಂದೆ ಇಟ್ಟು ಅವರು ವಿಚಾರ ಮಾಡಿ ರೇಟ್ ನ್ಯಾಯವಾಗಿದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಇದರಲ್ಲಿ ಸರ್ಕಾರದ ಪರವಾಗಿ 7-8 ಜನ ಸದಸ್ಯರಿದ್ದಾರೆ, ಅದರಲ್ಲಿ ತಜ್ಞರೂ ಇದ್ದಾರೆ. ಅವರು ಕೂಲಂಕಷವಾಗಿ ವಿಮರ್ಶೆಮಾಡಿ ಸರ್ಕಾರದ ಒಪ್ಪಿಗೆಗೆ ಕಳುಹಿಸುತ್ತಾರೆ. ಈ ರಾಕ್ ಫಿಲಿಂಗಿನಲ್ಲಿ ಬಹಳ ಆಶ್ಚರ್ಯಕರವಾದ ವಿಚಾರ ನಡೆದಿದೆ. ಬೋರ್ಡಿನವರು ಮೇ ತಿಂಗಳು 19ನೇ ತಾರೀಖು ಸೇರಬೇಕಾಗಿತ್ತು. ಅದರಲ್ಲಿ ರಾಕ್‌ಫಿಲಿಂಗಿಗೆ ಸಂಬಂಧಪಟ್ಟ ಟೆಂಡರುಗಳನ್ನು ಇಟ್ಟು ಅವರ ಒಪ್ಪಿಗೆಯನ್ನು ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಏನೋ ಕಾರಣದಿಂದ ಆ ಬೋರ್ಡ್ 19ನೇ ತಾರೀಖು ಸೇರಲಿಲ್ಲ, ಅನಿರ್ದಿಷ್ಟವಾಗಿ ಅದು ಮುಂದಕ್ಕೆ ಹೋಯಿತು. ಸರ್ಕಾರದವರು ಈ ಕೆಲಸ ಬಹಳ ಜಾಗ್ರತೆಯಾಗಿ ಆಗಬೇಕಾಗಿತ್ತು, ಬೋರ್ಡಿಗೆ ಕಳುಹಿಸುವುದಕ್ಕೆ ಸಾಧ್ಯವಾಗಲಿಲ್ಲ, ನೇರವಾಗಿ ಸಂಧಾನದ ಮೂಲಕ ಕೆಲಸ ಮಾಡಿಸಬೇಕಾಯಿತು ಎಂದು ಹೇಳಿದ್ದಾರೆ. ತಜ್ಞರ ಅಭಿಪ್ರಾಯವನ್ನು ಪಡೆಯಬೇಕೆಂಬ ಮನಸ್ಸು ಇದ್ದ ಪಕ್ಷದಲ್ಲಿ ಬೋರ್ಡ್ ಮೀಟಿಂಗನ್ನು 2-3 ದಿನಗಳಲ್ಲಿ ಅಥವಾ ಒಂದು ವಾರದಲ್ಲಿ ಕರೆಯಬಹುದಾಗಿತ್ತು. ಆ ನಂತರ ಅದರ ಮುಂದೆ ಇಟ್ಟು ಅದಕ್ಕೆ ಕೊಟ್ಟಿರುವ ದರಗಳು ಸರಿಯಾಗಿದೆಯೇ ಎಂದು ವಿಮರ್ಶೆ ಮಾಡಿ ಬೋರ್ಡಿನ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿತ್ತು. ಆ ಮಾರ್ಗವನ್ನು ಬಿಟ್ಟು ನೇರವಾಗಿ ಕಂಟ್ರಾಕ್ಟರುಗಳನ್ನು ಬರಮಾಡಿಕೊಂಡು ಸಂಧಾನದ ಮೂಲಕ ಆ ಕೆಲಸವನ್ನು ಕೊಟ್ಟಿದ್ದರಿಂದ ನನ್ನ ಲೆಕ್ಕಾಚಾರದ ಪ್ರಕಾರ 60 ಲಕ್ಷ ರೂಪಾಯಿ ನುಕ್ಸಾನಾಗಿದೆ.

ಡೌನ್‌ಸ್ಟ್ರೀಮ್‌ನಲ್ಲಿ ರಾಕ್ ಫಿಲಿಂಗ್ ಕೆಲಸವನ್ನು ತಾರಾಪೂರ್ ಕಂಪೆನಿಯವರಿಗೆ ವಹಿಸಿದ್ದರು. ಅವರು ಅದಕ್ಕೆ ಒಂದು ರೇಟನ್ನು ಕೊಟ್ಟಿದ್ದರು ಅದರ ಪ್ರಕಾರ ಕೆಲಸ ಮಾಡಬೇಕಾದ್ದು ಅವರ ಕರ್ತವ್ಯ. ಅವರು ಮಾಡದೆ ಇದ್ದರೆ ರೀ-ಟೆಂಡರ್ ಕರೆದು ಬೇರೆಯವರಿಗೆ ಕೊಡತಕ್ಕದ್ದು. ಅವರಿಗೆ ಅನ್ಯಾಯವಾಗಿದ್ದರೆ ಅವರು ಆರ್ಬಿಟ್ರೇಷನ್ನಿಗೆ ಹೋಗಬಹುದು. ಅವರು ಹಿಂದೆ ಕೆಲವು ಸಲ ಅನ್ಯಾಯವಾಗಿದೆ ಎಂದು ಆರ್ಬಿಟ್ರೇಷನ್ನಿಗೆ ಹೋಗಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಅವರು ಈ ಕೆಲಸವನ್ನು 60 ರೂಪಾಯಿಗಳಿಗೆ ಒಪ್ಪಿಕೊಂಡಿದ್ದರು. ಆ ನಂತರ ನಾವು ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಮಂತ್ರಿಗಳಿಗೆ ಹೇಳಿದರು, ಅವರು ಅದನ್ನು ಒಪ್ಪಿಕೊಂಡರು. ಹೀಗೆ ಒಪ್ಪಿಕೊಂಡ ಮೇಲೆ ಅದೇ ಕಂಟ್ರಾಕ್ಟರು ಒಂದು ಸಂಧಾನದ ಮೂಲಕ ಮೂರು ಜನ ಕಂಟ್ರಾಕ್ಟರುಗಳಿಗೆ ರಾಕ್ ಫಿಲಿಂಗ್ ಕೆಲಸವನ್ನು 110 ರೂಪಾಯಿ, 104 ರೂಪಾಯಿ, ಹೀಗೆ ಕೊಟ್ಟಿದ್ದೀರಿ, ನಮಗೂ ಅದೇ

ದರವನ್ನು ಕೊಡಿ, ನಾವೂ ಕೆಲಸ ಮಾಡುತ್ತೇವೆ ಎಂದರು. ಅದಕ್ಕೆ ಸರ್ಕಾರದವರು ಏನು ಹೇಳಬೇಕಾಗಿತ್ತು ಎಂದರೆ, ನಿಮಗೆ ಕೊಡುವುದಕ್ಕೆ ಸಾಧ್ಯವಿಲ್ಲ ; ನಿಮ್ಮ ಒಪ್ಪಂದದ ಪ್ರಕಾರ ಮಾಡುವ ಹಾಗಿದ್ದರೆ, ಮಾಡಿ ಎಂದು ಹೇಳುವುದು ಸರ್ಕಾರದ ಕೆಲಸವಾಗಿತ್ತು. ಆದರೆ ಸರ್ಕಾರದವರು ಅವರಿಗೆ ಹೆಚ್ಚು ದರವನ್ನು ಕೊಟ್ಟಿದ್ದರಿಂದ ದರಗಳ ವ್ಯತ್ಯಾಸದಲ್ಲಿ 42 ಲಕ್ಷ ರೂಪಾಯಿಗಳನ್ನು ತಾರಾಪೂರ್ ಕಂಪೆನಿಯವರಿಗೆ ನೇರವಾಗಿ ಹೆಚ್ಚಾಗಿ ಕೊಟ್ಟಿದ್ದಾರೆ. ಇದರಿಂದ ಸರ್ಕಾರ ತನ್ನ ಕರ್ತವ್ಯ ಲೋಪ ಮಾಡಿದೆ. ಈ ರೀತಿ ಯಾವ ನೀತಿ ನಿಯಮ ಕಾನೂನುಗಳಿಲ್ಲದೆ ಕೊಟ್ಟಿರುವುದು ಸರ್ಕಾರದವರೇ ಕೊಟ್ಟಿರುವ ಶ್ವೇತಪತ್ರದಲ್ಲಿ ಎದ್ದು ಕಾಣುತ್ತದೆ. ನಾನು ಹೇಳಿರತಕ್ಕ ಮಣ್ಣಿನ ಕಾಮಗಾರಿ, ಅಪ್‌ಸ್ಟ್ರೀಮ್ ರಾಕ್ ಫಿಲಿಂಗ್ ಮತ್ತು ಡೌನ್‌ಸ್ಟ್ರೀಮ್ ರಾಕ್ ಫಿಲಿಂಗ್ ಈ ಮೂರು ಬಾಬುಗಳಿಂದ ಸರ್ಕಾರಕ್ಕೆ 150 ಲಕ್ಷ ರೂಪಾಯಿ ಲುಕ್ಸಾನಾಗಿದೆ. ಈ ಹಣಕ್ಕೆ ಯಾರು ಜವಾಬ್ದಾರರು ಎನ್ನುವುದು ಬಹಳ ದೊಡ್ಡದಾದ ಪ್ರಶ್ನೆ. ದೇಶದಲ್ಲಿ ಶರಾವತಿಯ ಕಾರ್ಯ ಶೀಘ್ರವಾಗಿ ಆಗಬೇಕು, ಚೆನ್ನಾಗಿ ಆಗಬೇಕು ಎನ್ನುವ ಒಂದೇ ಒಂದು ಮಾತನ್ನು ಮುಂದಿಟ್ಟುಕೊಂಡು ಆಗಿಂದಾಗ್ಗೆ ಕಾನೂನುಗಳನ್ನು ಬದಿಗೊತ್ತಿ ಕೇವಲ ಕಂಟ್ರಾಕ್ಟುದಾರರ ಹಿತದೃಷ್ಟಿಯಿಂದ ಅವರು ಕೇಳುತ್ತಾರೆ ಎನ್ನುವ ಒಂದೇ ಒಂದು ದೃಷ್ಟಿಯಿಂದ 150 ಲಕ್ಷ ರೂಪಾಯಿಗಳನ್ನು ಕೊಡತಕ್ಕದ್ದು, ಏನು ಕೊಡಬೇಕಾಗಿತ್ತೋ ಅದಕ್ಕಿಂತ ಹೆಚ್ಚಾಗಿ ಕೊಟ್ಟಿರತಕ್ಕದ್ದು ಅನ್ಯಾಯದ ಪರಮಾವಧಿ, ಇದಕ್ಕೆ ಯಾರು ಹೊಣೆ ಎಂದರೆ ಸರ್ಕಾರವೇ ಹೊಣೆ ಎನ್ನುವ ಜವಾಬ್ದಾರಿಯನ್ನು ಸರ್ಕಾರ ಅರಿತುಕೊಳ್ಳಬೇಕಾಗಿದೆ. ಅದಕ್ಕೆ ನಾನು ಸರ್ಕಾರದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ.

ನಮ್ಮ ದೇಶದಲ್ಲಿ ಶರಾವತಿ ಒಂದೇ ಅಲ್ಲ ಅನೇಕ ಪ್ರಾಜೆಕ್ಟ್‌ಗಳನ್ನು ಕಟ್ಟತಕ್ಕ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಕಾಳೀನದಿ ಯೋಜನೆ, ಕೃಷ್ಣ ಎಡದಂಡೆ ಮತ್ತು ಬಲದಂಡೆ ಯೋಜನೆ, ಮಾಲಪ್ರಭ —ಹೀಗೆ ನೂರಾರು ಕೋಟಿ ರೂಪಾಯಿ ವೆಚ್ಚವಾಗುವ ಪ್ರಾಜೆಕ್ಟುಗಳನ್ನು ಮಾಡಬೇಕಾಗಿದೆ. ಹೀಗೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಕಾಲದಲ್ಲಿ ನೀತಿ ನಿಯಮಗಳನ್ನು ಪಾಲನೆ ಮಾಡದೆ ಹೋದರೆ ಖಂಡಿತವಾಗಿಯೂ ಏನು ಮಿತವ್ಯಯವನ್ನು ನಾವು ಅನುಸರಿಸಬೇಕೋ ಅದನ್ನು ಅನುಸರಿಸಿದಂತಾಗುವುದಿಲ್ಲ ಮತ್ತು ಈ ಯೋಜನೆಗಳಿಗೆ ವಿಶೇಷವಾದ ಖರ್ಚು ಬೀಳುತ್ತದೆ. ಸರ್ಕಾರದ ಖಜಾನೆಯ ಮೇಲೆ ದೊಡ್ಡ ಹೊರೆ ಬೀಳುತ್ತದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಶರಾವತಿ ಯೋಜನೆಯ ವಿಷಯದಲ್ಲಿ ಅನೇಕ ಸಾರಿ ನಾವು ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ, ಹಿಂದಿನ ಶಾಸನ ಸಭೆಯವರು ಕೂಡ ಅದರ ಬಗ್ಗೆ ದೊಡ್ಡ ಚರ್ಚೆಯನ್ನು ಈ ಸಭೆಯಲ್ಲಿ ಮಾಡಿದ್ದಾರೆ. ಎಲ್ಲ ಕಾಲದಲ್ಲಿಯೂ ಕೂಡ ಮುಖ್ಯ ಮಂತ್ರಿಗಳು ಹೇಳಿದರು, ಬಹಳ ಲಘುವಾಗಿ, ಇಂಥ ದೊಡ್ಡ ಕಾಮಗಾರಿ ಆಗುವಾಗ 50 ಲಕ್ಷ ರೂಪಾಯಿ ಒಂದು ಕೋಟಿ ರೂಪಾಯಿ ಲಘುವಾಗಿ ಕಾಣಬಹುದು. ಯಾವ ಕೆಲಸವನ್ನು ಮಾಡಿದರೂ ಕೂಡ ಅಚ್ಚುಕಟ್ಟಾಗಿ, ಕಟ್ಟುನಿಟ್ಟಾಗಿ ಇರಬೇಕು, ಧರ್ಮಕ್ಕೆ, ಸತ್ಯಕ್ಕೆ, ನ್ಯಾಯಕ್ಕೆ ಬದ್ಧವಾಗಿರಬೇಕು. ಕೇವಲ ಕಂಟ್ರಾಕ್ಟ್‌ದಾರರ ಬಲೆಗೆ ಬಿದ್ದು ಹಣವನ್ನು ಅವರು ದೋಚಿಕೊಂಡು ಹೋಗತಕ್ಕ ಕ್ರಮವನ್ನು ಮಾಡಿದರೆ, ನಮ್ಮ ದೇಶವನ್ನು ಸಂತುಷ್ಟ ದೇಶವನ್ನಾಗಿ ಮಾಡಬೇಕೆಂದು ಕಂಕಣಬದ್ಧರಾಗಿರತಕ್ಕ ದೇಶದಲ್ಲಿ ಅದನ್ನು ಹೇಗೆ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನಾನು ಕೇಳುತ್ತೇನೆ.

ಈ ಪ್ರಾಜೆಕ್ಟ್ ವಿಚಾರದಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ಬಂದು ಅಲ್ಲಿ ಒಂದೇ ರಾತ್ರಿ ತಂಗಿದ್ದು ಅವರ ಅಭಿಪ್ರಾಯವನ್ನು ಕೊಟ್ಟರು ಎಂದು ಕಾಣುತ್ತದೆ. ಗೇರುಸೊಪ್ಪ ಜಲಪಾತದ ಭವ್ಯ ದೃಶ್ಯ ಮತ್ತೆ ಯಾವ ಭಾಗದಲ್ಲಿಯೂ ನೋಡುವುದಕ್ಕೆ ಸಿಕ್ಕುವುದಿಲ್ಲ. ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಕೂಡ ಅಂಥ ದೃಶ್ಯವನ್ನು ನಿರ್ಮಾಣ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅಂಥ ಸುಂದರ ದೃಶ್ಯವನ್ನು ನೋಡಿದ ಡಾ. ಕೆ. ಎಲ್. ರಾವ್ ಅವರು ಸಣ್ಣ ಪುಟ್ಟ ಅನ್ಯಾಯಗಳು ನಡೆದಿರಬಹುದೆಂದು ತಿಳಿದರೂ ಕೂಡ ಎಲ್ಲ ಸರಿಯಾಗಿದೆ ಎನ್ನುವ ಸರ್ಟಿಫಿಕೇಟನ್ನು ಕೊಟ್ಟರು. ಭಾಕ್ರ-ನಂಗಾಲ ಮುಂತಾದ ಕಡೆ ಕೋಟಿಗಟ್ಟಲೆ ಅನ್ಯಾಯ ನಡೆದಿರುವುದನ್ನು ನೋಡಿ ಇಲ್ಲಿ ನಡೆದಿರುವುದು ಹೆಚ್ಚಲ್ಲ ಎಂದು ಸರ್ಟಿಫಿಕೇಟು ಕೊಟ್ಟು ಹೋದರು. ಹೀಗೆ ಹೇಳಿದಾಗ ಅವರ ಮನಸ್ಸಿನಲ್ಲಿ ಒಂದು ವಿಚಾರ ಬಂದಿರಬಹುದು. ಏನೆಂದರೆ, ಈ ಶರಾವತಿ ಪ್ರಾಜೆಕ್ಟಿಗೆ ಹೊರದೇಶಗಳಿಂದ ಅಪಾರವಾದ ಹಣ ಬರುತ್ತಿದೆ. ಇದರ ಬಗ್ಗೆ ದೊಡ್ಡ ಕೂಗನ್ನು ಎಬ್ಬಿಸಿದರೆ, ಗೊಂದಲವನ್ನು ಎಬ್ಬಿಸಿದರೆ, ದೇಶದಲ್ಲಿ ಅಪಪ್ರಚಾರ ನಡೆದರೆ ನಮಗೆ ಬರತಕ್ಕ ನೆರವಿಗೆ ತಡೆಯುಂಟಾದೀತೋ ಏನೋ ಎನ್ನತಕ್ಕ ಭಾವನೆ ಅವರ ಮನಸ್ಸಿನಲ್ಲಿ ಬಂದು ಬಹಿರಂಗವಾಗಿ ಎಲ್ಲ ಚೆನ್ನಾಗಿದೆ ಎಂದು ಹೇಳಿ ಹೋಗಿಬಿಟ್ಟರು. ಇದೇ ರೀತಿ ಮೊನ್ನೆ ತಾನೆ ಆ ಸ್ಥಾನಕ್ಕೆ ಬಂದ ನಮ್ಮ ರಾಜ್ಯದವರಾದ ಶ್ರೀಮಾನ್ ದಾನಪ್ಪನವರು ಬೆಂಗಳೂರಿಗೆ ಬಂದರು. ಅವರು ಶರಾವತಿಗೆ ಹೋಗದೆ ಇಲ್ಲಿಯೇ ಕುಳಿತುಕೊಂಡು, ಅಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಹೇಳಿದರು......

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೋಗಿದ್ದರು, ಏಳೂವರೆ ಗಂಟೆಯಲ್ಲಿ ತಿಪಟೂರಿನ ಟಿ.ಬಿ.ಯಲ್ಲಿದ್ದರು.

ಶ್ರೀ ಎಸ್. ಶಿವಪ್ಪ.—ಅವರೇನೋ ಎಲ್ಲವೂ ಬಹಳ ಚೆನ್ನಾಗಿದೆ ಎಂದು ಹೇಳಿದರು. ಆದರೆ ಕೇಂದ್ರ ಸಚಿವರ ಸರ್ಟಿಫಿಕೇಟಿನಿಂದ ಅಥವಾ ಅವರ ಶಹಭಾಸ್‌ಗಿರಿಯಿಂದ ಅಲ್ಲಿ ಏನು ಅನ್ಯಾಯ ನಡೆದಿದೆಯೋ ಅದು ದೂರವಾಗುವುದಿಲ್ಲ. ಅಮೆರಿಕ ದೇಶದವರು ನಮಗೆ ಸಹಾಯ ಮಾಡುತ್ತಿದ್ದಾರೆ, ಅವರು ಇನ್ನೂ ಹೆಚ್ಚಾಗಿ ಸಹಾಯ ಮಾಡಬೇಕಾಗಿದೆ. ಅವರು ತಾವು ಕೊಟ್ಟ ನೆರವಿನಿಂದ ನಡೆಯುವ ಕಾಮಗಾರಿಗಳು ಎಷ್ಟು ಮಟ್ಟಿಗೆ ನಡೆಯುತ್ತಿವೆ ಎಂಬುದನ್ನು ನೋಡುತ್ತಾರೆ. ಒಂದು ವೇಳೆ ನಾವು ಇಲ್ಲಿ ಅನ್ಯಾಯವೇನಾದರೂ ನಡೆದಿದೆಯೆ ಎಂಬುದನ್ನು ತನಿಖೆ ಮಾಡಲು ಸರಕಾರ ಕೂಡ ಒಂದು ನ್ಯಾಯಾಂಗ ವಿಚಾರಣೆ ನಡೆಸುತ್ತಾರೆಂದು ಅವರಿಗೆ ತಿಳಿಧರೆ, ಇಂಡಿಯಾ ದೇಶದಲ್ಲಿ ಪ್ರಜಾಪ್ರಭುತ್ವ ಪರಿಪಕ್ವವಾಗಿ ಜೀವಂತವಾಗಿ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಅವರಿಗೆ ಅರಿವಾಗುತ್ತದೆ. ಹೀಗಾಗಬೇಕು. ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಸಂಕೋಚ ಪಡಬಾರದು. ಈ ಕಾಮಗಾರಿಯ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆಯನ್ನು ನಡೆಸಬೇಕು. ನಮ್ಮ ದೇಶದಲ್ಲಿ ಇದು ದೊಡ್ಡ ಕಾಮಗಾರಿ, ಇದರ ಸಂಬಂಧವಾಗಿ ದೊಡ್ಡ ಅಪವಾದ ಬಂದಿದೆ. ಇದರ ಮೇಲೆ ಖರ್ಚು ಮಾಡುವ ರೀತಿಯಲ್ಲಿ ಲೋಪದೋಷಗಳಿವೆಯೆಂಬ ಆರೋಪ ಬಂದಿದೆ, ಇದನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಬಾರದು. ಹಾಗೆ ಮಾಡಿದರೆ ಮುಂದೆ ದೊಡ್ಡ ದೊಡ್ಡ ಕಾಮಗಾರಿಗಳನ್ನೂ ಯೋಜನೆಗಳನ್ನೂ ಕಾರ್ಯಗತ ಮಾಡುವಾಗ ಅನೇಕ ಲೋಪದೋಷಗಳಿಗೆ ಎಡೆಗೊಟ್ಟ ಹಾಗಾಗುತ್ತದೆ. ಭ್ರಷ್ಟಾಚಾರಗಳ ವಿಚಾರದಲ್ಲಿ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರಕಾರದಿಂದ ನಮ್ಮ ಸರಕಾರದವರೆಗೆ ಕೂಗು ಎದ್ದಿದೆ. ಭ್ರಷ್ಟಾಚಾರ ನಿವಾರಣೆ ಮುಂತಾದ ಶಬ್ದಗಳ ಪ್ರಯೋಗದಲ್ಲೇ ತೃಪ್ತರಾಗದೆ, ಅದನ್ನು ಪ್ರಯೋಗ ಮಾಡುವುದರಲ್ಲಿ, ಕಾರ್ಯಗತ ಮಾಡುವುದರಲ್ಲಿ, ನಾವು ಮೇಲ್ಪಂಕ್ತಿ ಹಾಕಿದರೆ ಆಗ ಮೈಸೂರು ದೇಶ ಇತರ ದೇಶಗಳಿಗೆ ಮಾದರಿಯಾಗುವುದಕ್ಕೆ ಅವಕಾಶವಿದೆ. ನಮ್ಮ ರಾಜ್ಯದ ಮುಖ್ಯ ಸಚಿವರು ಈ ಖಾತೆಯ ಜವಾಬ್ದಾರಿ ಹೊತ್ತಿದ್ದಾರೆ. ನೀರಾವರಿ ಯೋಜನೆಗಳು ತಮ್ಮ ನೇತೃತ್ವದಲ್ಲಿ ಜರುಗಬೇಕಾಗಿದೆ. ಆದ್ದರಿಂದ ಈಹೊತ್ತು ಶರಾವತಿಯಲ್ಲಿ ಏನೇ ಕಾರ್ಯ ಜರುಗಲಿ ಅದರ ಜವಾಬ್ದಾರಿ ಅವರ ಮೇಲೆ ಬೀಳುತ್ತದೆ. ಅನ್ಯಾಯ ನಡೆದಿದೆಯೆ ಎನ್ನುವುದನ್ನು ವಿಚಾರ ಮಾಡಿ, ಹಾಗೆ ನಡೆದಿಲ್ಲವೆಂದು ಅವರು ದೇಶಕ್ಕೆ ಹೇಳಬೇಕಾಗಿದೆ. ಅವರು ನಾನೇ ಎಲ್ಲವನ್ನೂ ವಿಚಾರ ಮಾಡುತ್ತೇನೆ ಎಂದು ಹೇಳಬಹುದು. ತಾವೇ ಜವಾಬ್ದಾರಿ ಹೊತ್ತಿರುವ ಪೋರ್ಟ್‌ಫೋಲಿಯೋ ವಿಚಾರದಲ್ಲಿ ಎಲ್ಲವೂ ಸರಿಯಾಗಿದೆ ಎಂದು ಅವರೇ ಹೇಳಿದರೆ ಅದು ಸರಿಯಲ್ಲ. ಸರಕಾರದ ಮೇಲ್ಮೆಯನ್ನು ಹೆಚ್ಚಿಸಿ ಎಂದು ನಾನು ಅವರಿಗೆ ಶಾಸನಸಭೆಯ ವೇದಿಕೆಯಿಂದ ಹೇಳುತ್ತೇನೆ. ನ್ಯಾಯಾಂಗ ವಿಚಾರಣೆಯನ್ನು ಏರ್ಪಾಡು ಮಾಡಬೇಕು, ಅದರಿಂದ ಶರಾವತಿಯ ಕಾಮಗಾರಿಯಲ್ಲಿ ಅನ್ಯಾಯ ಹೇಗೆ ನಡೆದಿದೆ ಎಂಬುದನ್ನು ಬಹಿರಂಗವಾಗಿ ಶ್ರುತಪಡಿಸಿದರೆ ಅಂದಿಗೆ ನೀವು ಮಾಡಿದ ಕೆಲಸ ಸಫಲವಾಗುತ್ತದೆ ಎಂದು ನಾನು ಆಗ್ರಹಪೂರ್ವಕ ಬಿನ್ನಹ ಮಾಡುತ್ತೇನೆ. ಇದರಿಂದ ಸರಕಾರ ಒಂದು ವಿಷಯವನ್ನು ನೆನೆಸಿಕೊಳ್ಳಬೇಕಾಗಿದೆ. ಶರಾವತಿ ಯೋಜನೆಗಳಲ್ಲಿ ನಾವು ಈಹೊತ್ತು ಚರ್ಚೆ ಮಾಡಿರುವುದು ಕೇವಲ ಸಿವಿಲ್ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ. ಲಿಂಗನಮಕ್ಕಿ ಕಟ್ಟೆ, ತಳಕಳಲೆ ಕಟ್ಟೆ, ಸರ್ಜ್‌ಟ್ಯಾಂಕ್ ಇತ್ಯಾದಿಗಳಿಗೆ ಮಾತ್ರ ಸಂಬಂಧಪಟ್ಟದ್ದು. ಇದರಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡುವ ಯಂತ್ರೋಪಕರಣಗಳಿಗೆ ಸಂಬಂಧಪಟ್ಟದ್ದೇನೂ ಸೇರಿಲ್ಲ. ಅವುಗಳ ಬಗ್ಗೆ ಯಾವ ರೀತಿ ಕೆಲಸ ಕಾರ್ಯಗಳು ನಡೆದಿವೆ, ವ್ಯವಹಾರಗಳು ನಡೆದಿವೆ ಎನ್ನುವುದು ಇದರಿಂದ ದೂರವಾಗಿದೆ. ಮಣ್ಣು, ಕಲ್ಲು, ಸಿಮೆಂಟು, ಕಬ್ಬಿಣ ಇವುಗಳ ಕಾಮಗಾರಿಗಳು ಮಾತ್ರ ಕಣ್ಣಿಗೆ ಕಾಣುತ್ತಿವೆ. ಸಿವಿಲ್ ಕಾಮಗಾರಿಗಾಗಿ ಸುಮಾರು ಮೂವತ್ತು ನಲವತ್ತು ಕೋಟಿ ರೂಪಾಯಿ ಖರ್ಚಾಗಬಹುದು; ಇದಕ್ಕಿಂತ ಹೆಚ್ಚಾಗಿ ಯಂತ್ರಗಳಿಗೆ ಖರ್ಚು ಮಾಡಬೇಕಾಗಿದೆ. ಆ ವ್ಯವಹಾರ ಯಾವ ರೀತಿ ನಡೆದಿದೆ ಎಂಬ ವಿಚಾರ ಅಷ್ಟಾಗಿ ಕೊಟ್ಟಿಲ್ಲ. ಅದೆಲ್ಲವೂ ಇದುವರೆಗೂ ಮೊಗಮ್ ಆಗಿ ನಡೆಯುತ್ತಿದೆ. ಅದರ ವಿಷಯವನ್ನೂ ಈ ವರದಿಯಲ್ಲಿ ಅಥವಾ ಪತ್ರದಲ್ಲಿ ಸೇರಿಸಿದ್ದರೆ ಚೆನ್ನಾಗಿತ್ತು. ಎಲ್ಲದರ ಸೂಕ್ಷ್ಮ ಪರಿಚಯವಾಗುತ್ತಿತ್ತು. ಆದರೆ ಇದರಲ್ಲಿ ಬರಿಯ ಮಣ್ಣು ಕಾಮಗಾರಿ ಮಾತ್ರ ಸೇರಿದೆ.

ಇನ್ನೊಂದು ವಿಚಾರ. ಲಿಂಗನಮಕ್ಕಿಯಿಂದ ಆನೆಗುಂಡಿ ಪವರ್ ಸ್ಟೇಷನ್‌ಗೆ ಹೋಗುವ ಒಂದು ಆರ್.ಸಿ.ಸಿ. ಡಕ್ಟ್ ಮಾಡಿದ್ದಾರೆ. ಇದಕ್ಕೆ ಮೊದಲು ಸುಮಾರು ಒಂದೂವರೆ ಕೋಟಿ ರೂಪಾಯಿ ಅಂದಾಜು ಮಾಡಿದರು. ಅಲ್ಲಿನ ನೆಲ ಟ್ರೆಚರಸ್, ಎಂದರೆ ನೆಚ್ಚಲಾಗದ ನೆಲವೆಂದು ಅದನ್ನು ಎರಡು ಕೋಟಿ ಅರವತ್ತು ಲಕ್ಷಕ್ಕೆ ಮಾರ್ಪಾಡು ಮಾಡಿ ಕಟ್ಟಿಸಿದ್ದಾರೆ. ಒಂದಕ್ಕೆ ಎರಡ

ರಷ್ಟು ಮಾಡಿದ್ದಾರೆ ಆರ್.ಸಿ.ಸಿ. ಡಕ್ಟ್‌ಗೆ. ಹೀಗಿದ್ದರೂ ಅದು ಒಡೆದುಹೋಗಿದೆ ಎಂದು ತಿಳಿದು ಬಂದಿದೆ......

ಶ್ರೀ ಎಸ್. ನಿಜಲಿಂಗಪ್ಪ.—ಒಡೆದಿಲ್ಲ, ಸೀಳುಬಂದಿದೆ.

ಶ್ರೀ ಎಸ್. ಶಿವಪ್ಪ.—ಈ ಯೋಜನೆಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಹಾಕಿದ ಮೇಲೆ, ಅಲ್ಲಿ ಯಾವ ಪ್ರಮಾಣದಲ್ಲಿ ಸಿಮೆಂಟ್ ಹಾಕುತ್ತಾರೆ, ಯಾವ ಪ್ರಮಾಣದಲ್ಲಿ ಕಬ್ಬಿಣ ಹಾಕುತ್ತಾರೆ, ಯಾವ ಪ್ರಮಾಣದಲ್ಲಿ ಹಾಕಬೇಕೋ ಆ ಪ್ರಮಾಣದಲ್ಲಿ ಹಾಕಿದ್ದಾರೆಯೆ ಅಥವಾ ಕಡಮೆ ಪ್ರಮಾಣದಲ್ಲಿ ಹಾಕಿದ್ದಾರೆಯೆ ಎನ್ನುವುದನ್ನು ನೋಡಬೇಕು. ತಜ್ಞರಿಂದ ಇದನ್ನು ಪರೀಕ್ಷೆ ಮಾಡಿಸಬೇಕು. ಒಂದು ವಿಚಾರವನ್ನು ಸರಕಾರದ ಇಲಾಖೆಯವರೇ ಹೇಳಿದ್ದಾರೆ. ಅನೇಕ ವ್ಯಾಗನ್ ಸಿಮೆಂಟು ಮತ್ತು ಕಬ್ಬಿಣ ಅಲ್ಲಿಂದ ಬೇರೆ ಕಡೆಗೆ ಸಾಗಿಹೋಗುತ್ತಿತ್ತು, ಅದನ್ನು ಪೋಲೀಸಿನವರು ಹಿಡಿದಿದ್ದಾರೆಂದು ಹೇಳಿದ್ದಾರೆ. ಅದರ ಕತೆ ಏನಾಯಿತು, ಅದರ ಫಲಿತಾಂಶ ವೇನಾಯಿತು ಎನ್ನುವುದು ಇದುವರೆಗೂ ನಮಗೆ ಗೊತ್ತಿಲ್ಲ. ಯಾವ ಪ್ರಮಾಣದಲ್ಲಿ ಹೊರಕ್ಕೆ ಸಿಮೆಂಟ್ ಹೋಯಿತು ಎಲ್ಲಿಗೆ ಹೋಯಿತು ಅಥವಾ ನದಿಗೆ ಹೋಯಿತೆ, ಕಬ್ಬಿಣ ಎಲ್ಲಿ ಹೋಯಿತು ಎಂಬುದು ಖಚಿತವಾಗಿ ನಮಗೆ ತಿಳಿಯಲಿಲ್ಲ. ಕಬ್ಬಿಣ ಬೆಂಗಳೂರಿಗೆ ಬಂತು ಎಂದು ಹೇಳುತ್ತಾರೆ. ಅಂತೂ ಹೊಳೆಗೆ ಹೋಗಿಲ್ಲ. ಕಟ್ಟಡದ ಭದ್ರತೆ ಕೂಡ ಸಂಶಯಕ್ಕೆ ಎಡೆಗೊಟ್ಟಿದೆ. ಈಗಾಗಲೇ ಒಂದು ಕಾಲುವೆ ಅಪಾಯ ಸ್ಥಿತಿಯಲ್ಲಿದೆಯೆಂದು ವರ್ತಮಾನ ಬಂದಿದೆ. ನನ್ನ ಆಶೆ ಅಪಾಯ ವಾಗದೇಯಿರಲಿ ಎಂಬುದು. ಮೈಸೂರು ದೇಶದ ಸಂಪತ್ತು ಶರಾವತಿಯಲ್ಲಡಗಿದೆ. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಬೆಳೆದು ನಮ್ಮ ದೇಶದ ಸಂಪತ್ತು ವೃದ್ಧಿಯಾಗಲಿ ಎಂಬುದು ನಮ್ಮ ಅಭಿಲಾಷೆ. ಆದರೆ ನಮಗೆ ಕೇಳಬಂದಿರುವಹಾಗೆ ಅಲ್ಲಲ್ಲಿ ಲೀಕ್ ಇದೆ ಎಂದು ಹೇಳುತ್ತಾರೆ. ನಾನೂ ಅಲ್ಲಿಗೆ ಹೋಗಿದ್ದೆ. ಆದರೆ ನಾನು ಹೋದಾಗ ಆ ಡಕ್ಟ್ ನೋಡುವುದಕ್ಕೆ ಚೆನ್ನಾಗಿ ಕಂಡಿತು. ಆಗ ಕಟ್ಟಡ ಕಟ್ಟುತ್ತಿದ್ದರು. ಈಗ ನೀರು ತುಂಬಿದಮೇಲೆ ಅದರ ಶಕ್ತಿಯನ್ನಳೆಯುವುದಕ್ಕೆ ಸರಿಯಾದ ಕಾಲ. ಕಾಲುವೆಯಲ್ಲಿ ಬಿರುಕುಗಳಾಗಿವೆ ಎಂದು ಹೇಳುತ್ತಾರೆ. ಅಲ್ಲಿಗೆ ಎಷ್ಟು ಸಿಮೆಂಟು, ಎಷ್ಟು ಕಬ್ಬಿಣ ಹಾಕಬೇಕಾಗಿತ್ತೋ ಅಷ್ಟನ್ನು ಹಾಕಿಲ್ಲವೆಂದು ವರದಿ ಬಂದಿದೆ. ನಮ್ಮಲ್ಲಿ ರಿಸರ್ಚ್ ಸ್ಟೇಷನ್‌ಗಳು ಕೃಷ್ಣರಾಜಸಾಗರ ಮತ್ತು ಭದ್ರಾವತಿಯಲ್ಲಿವೆ. ಏನು ಪ್ರಮಾಣದಲ್ಲಿ ಹಾಕಬೇಕಾಗಿತ್ತೋ ಆ ಪ್ರಮಾಣದಲ್ಲಿ ಹಾಕಿದ್ದಾರೆಯೆ ಅಥವಾ ಇಲ್ಲವೆ ಎನ್ನುವುದನ್ನು ಅಲ್ಲಿ ಪರೀಕ್ಷೆ ಮಾಡಿ, ತಪ್ಪಿತಸ್ಥರು ಯಾರೇ ಆಗಿರಲಿ ಅವರಿಗೆ ಉಗ್ರವಾದ ಶಿಕ್ಷೆ ಮಾಡಬೇಕಾಗಿತ್ತು. ಆಗ ದೇಶದಲ್ಲಿ ದೊಡ್ಡ ದೊಡ್ಡ ಕಾಮಗಾರಿಗಳಿಗೆ ಸಂಬಂಧಪಟ್ಟವರು ಕೆಲಸ ಗಳನ್ನು ಸಂಬಂಧಪಟ್ಟವರು ಎಚ್ಚರಿಕೆಯಿಂದ ಮಾಡುತ್ತಿದ್ದರು. ಮಾನ್ಯ ಮುಖ್ಯ ಸಚಿವರಲ್ಲಿ ಹೇಳಿಕೊಳ್ಳತಕ್ಕಂಥಾದ್ದು ಇಷ್ಟೇ: ಪಿ.ಡಬ್ಲ್ಯೂ.ಡಿ. ಇಲಾಖೆ ಅದು ಬಹಳ ಆಕರ್ಷಣೀಯವಾಗಿದೆ. ಕಂಟ್ರಾಕ್ಟರುಗಳಿಗೆ ಕೋಟ್ಯಾಂತರ ರೂಪಾಯಿ ಕೊಡುತ್ತಿದ್ದೀರಿ. ಈ ಹಣ ಎಲ್ಲರಿಗೂ ಹಂಚು ತ್ತಾರೆ. ಇದರಲ್ಲಿ ಒಂದು ಭಾಗ ಎಂಜಿನಿಯರುಗಳಿಗೆ ಹೋಗುತ್ತದೆ. ಅಧಿಕಾರಿಗಳನ್ನು ತಮ್ಮ ಬಲೆಗೆ ಹಾಕಿಕೊಳ್ಳತಕ್ಕಂಥ ಕಂಟ್ರಾಕ್ಟರುಗಳು ಇದ್ದಾರೆ. ಈ ಹಣದ ಮಾಯಾಜಾಲದಿಂದ ಅವರನ್ನು ಬಂಧನದಲ್ಲಿ ಹಾಕುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳದೇ ಹೋದರೆ ಇಂಥ ಬೃಹತ್ ಯೋಜನೆಯ ಕೆಲಸದಲ್ಲಿ ಕಂಟ್ರಾಕ್ಟರ್ ಜೊತೆಗೆ ಅಧಿಕಾರಿಗಳು ಸೇರಿಬಿಡುತ್ತಾರೆ. ಎಂಜಿನಿಯರುಗಳು ಕಂಟ್ರಾಕ್ಟರರಿಗೆ ಹೇಳಿಕೊಟ್ಟಿದ್ದಾರೋ ಏನೋ ಎನ್ನುವ ಹಾಗೆ ಇದೆ. ಅಂದಾಜು ಮಾರ್ಪಾಟು ಮಾಡಿಕೊಡುತ್ತೇವೆ ಹೆಚ್ಚಿನ ರೇಟು ಕೊಡುತ್ತೇವೆ ಎಂದು ಎಂಜಿನಿಯರುಗಳು ಕಂಟ್ರಾಕ್ಟರರಿಗೆ ಹೇಳಿಕೊಟ್ಟಿದ್ದಾರೋ ಏನೋ ಎಂಬ ಸಂಶಯ ಈ ವೈಟ್ ಪೇಪರ್‌ನಲ್ಲಿ ಎದ್ದು ಕಾಣುತ್ತದೆ.

There is a continuous conspiracy between the engineers and the workers to get more and more money through revising estimates, revising plans and remodelling and getting substituted works.

ಸರಕಾರದಿಂದ ಹೆಚ್ಚು ಹಣ ಪಡೆಯಲು ಉಭಯತ್ರರು ಸೇರಿಕೊಂಡಿದ್ದಾರೆ ಎಂದು ಅನಿಸುತ್ತದೆ. ಆದುದರಿಂದ ಇಂಥ ಅಧಿಕಾರಿಗಳನ್ನು ಉಗ್ರ ಶಿಕ್ಷೆಗೆ ಗುರಿಪಡಿಸಬೇಕಾದುದು ಅಗತ್ಯ. ಇಲ್ಲದಿದ್ದರೆ ಸರಕಾರ ಖರ್ಚು ಮಾಡುವ ಹಣಕ್ಕೆ ಸರಿಯಾದ ಪ್ರತಿಫಲ ದೊರೆಯುವುದಿಲ್ಲ. ಶರಾವತಿ ಯೋಜನ ಯಲ್ಲಿ ಕೆಲಸ ಮಾಡಿದಂಥ ಒಬ್ಬ ಎಂಜಿನಿಯರು ರಾಜೀನಾಮೆ ಕೊಟ್ಟು ಅಲ್ಲಿಂದ ಬಂದಮೇಲೆ ಹೆಚ್ಚಿನ ಸಂಬಳದಮೇಲೆ ಅವರ ಸೇವೆಯನ್ನು ಈ ಕಂಟ್ರಾಕ್ಟರರು ಪಡೆದಿದ್ದಾರೆ. ಸರಕಾರ ಕೊಡು ತ್ತಿದ್ದ ಸಂಬಳದ ಎರಡರಷ್ಟು ಸಂಬಳ ಅವರು ಕೊಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಅಂಥ ಎಂಜಿನಿಯರ್ ಅವರು ಯಾರು ?

ಶ್ರೀ ಎಸ್. ಶಿವಪ್ಪ.—ಶ್ರೀ ರಾಯಜೂರ್ ಅವರು. ಇಲ್ಲಿ ದೊರೆಯುತ್ತಿದ್ದ ಸಂಬಳದ ಎರಡರಷ್ಟು ಸಂಬಳ ಅವರಿಗೆ ಕಂಟ್ರಾಕ್ಟರರು ಕೊಡುತ್ತಿದ್ದಾರೆಂದು ತಿಳಿದು ಬಂದಿದೆ. ತಾರಾಪೋರೆ, ಡಂಕನ್ ಮೊದಲಾದ ದೊಡ್ಡ ದೊಡ್ಡ ಕಂಟ್ರಾಕ್ಟರುಗಳ ಶಕ್ತಿ ಎಷ್ಟು ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಅವರಿಗೆ ಒಂದು ತರಹದ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಇದೆ. ಹೆಚ್ಚು ಸಂಬಳ ಕೊಡುವುದರಿಂದ ಅದು ಹೋಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ನಾವು ಜಾಸ್ತಿ ಸಂಬಳ ಅವರಿಗೆ ಕೊಟ್ಟುಬಿಡೋಣವೇನು ?

ಶ್ರೀ ಎಸ್. ಶಿವಪ್ಪ.—ಒಬ್ಬ ಎಂಜಿನಿಯರನಿಗೆ ಐದಾರು ಸಾವಿರ ಹತ್ತು ಸಾವಿರ ಸಂಬಳ ಕಂಟ್ರಾಕ್ಟರು ಕೊಡಬೇಕಾದರೆ ಯಾರ ಹಣದಿಂದ ಕೊಡುತ್ತಾರೆ? ಅವನ ಸಂಪಾದನೆ ಎಷ್ಟು ಹೇರಳವಾಗಿ ಇದೆ? ನಾನು ಶರಾವತಿ ಯೋಜನೆ ನೋಡುವುದಕ್ಕೆ ಹೋದಾಗ್ಗೆ ಬಿಸಿಲಿನಲ್ಲಿ ತಿರುಗಾಡಿದ ಮೇಲೆ ನನಗೆ ನೀರಡಿಕೆಯಾಯಿತು. ಕುಡಿಯಲು ನೀರು ಬೇಕು ಎಂದು ಕೇಳಲು ನನ್ನನ್ನು ಗೆಸ್ಟ್‌ಹೌಸಿಗೆ ಕರೆದುಕೊಂಡು ಹೋದರು. ಈ ಗೆಸ್ಟ್‌ಹೌಸಿಗೆ ಒಂದು ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಕಂಟ್ರಾಕ್ಟರ್ ಹೇಳಿದರು. ಕೆಲಸ ಮುಗಿದಮೇಲೆ ಈ ಗೆಸ್ಟ್‌ಹೌಸ್ ಏನು ಮಾಡುತ್ತೀರಿ ಎಂದು ನಾನು ಅವರನ್ನು ಕೇಳಿದೆ. ಸರಕಾರದವರು ವಹಿಸಿಕೊಂಡರೆ ಕೊಡುತ್ತೇವೆ ಇಲ್ಲದಿದ್ದರೆ ಇದನ್ನು ಡಿಮಾಲಿಶ್ ಮಾಡುತ್ತೇವೆಂದು ಹೇಳಿದರು. ಈ ಕಂಟ್ರಾಕ್ಟರು ಒಂದು ಟೆಂಪರರಿ ಕಟ್ಟಡಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಬೇಕಾದರೆ ಅವರ ಅಂತಸ್ತು ಏನು ಇದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇಂಥ ಕೆಲಸಗಳಿಂದ ಏನಾಗಿದೆ ಎಂದರೆ, ಒಂದು ಶ್ರೀಮಂತವರ್ಗ ನಿರ್ಮಾಣ ಮಾಡುವ ರೀತಿಯಲ್ಲಿ ಇಂದು ನಾವು ಹೊರಟಿದ್ದೇವೆ. ವರ್ಗರಹಿತ ಸಮಾಜ ನಿರ್ಮಾಣ ಮಾಡಬೇಕೆಂದು ಸರಕಾರದ ಉದ್ದೇಶ ಇದ್ದರೂ ಇಂದು ಇಂಥ ಒಂದು ಶ್ರೀಮಂತವರ್ಗ ನಿರ್ಮಾಣವಾಗುತ್ತಿದೆ. ಅವರು ನಮ್ಮನ್ನು ನಿಮ್ಮನ್ನು ಹಣದ ಮಾಯಾಜಾಲದಿಂದ ಬಂಧನ ಮಾಡತಕ್ಕಂಥ ಶಕ್ತಿ ಹೊಂದಿದ್ದಾರೆ. ಇವರ ಬಗ್ಗೆ ಎಚ್ಚರಿಕೆ ಕೊಡುತ್ತೇನೆ. ಕಟ್ಟುನಿಟ್ಟಾಗಿ ಈ ವರ್ಗದಮೇಲೆ ಸರಕಾರದ ಬಿಗಿಮುಷ್ಟಿ ಇರಬೇಕು ಎಂದು ಎಚ್ಚರಿಕೆ ಕೊಡುತ್ತೇನೆ

ಇನ್ನು ಹೆಚ್ಚು ಕಾಲ ಮಾತನಾಡಲು ತೆಗೆದುಕೊಳ್ಳಲು ನನಗೆ ಇಚ್ಛೆ ಇಲ್ಲ. ಒಂದು ಮಾತು ಕೊನೆಯದಾಗಿ ಹೇಳುತ್ತೇನೆ. ಶರಾವತಿ ಯೋಜನೆಯ ಬಗ್ಗೆ ಒಂದು ನಿಷ್ಪಕ್ಷಪಾತ ನ್ಯಾಯಾಂಗ ವಿಚಾರಣೆ ನಡೆಸಬೇಕು. ಈ ರೀತಿ ಒಂದು ನ್ಯಾಯಾಂಗ ವಿಚಾರಣೆ ನಡೆಸಿದರೆ ಬಹುಶಃ ನಮಗೂ ನಿಮಗೂ ಗೊತ್ತಿರದ ಅನೇಕ ಅಂಶಗಳು ಹೊರಬರಬಹುದು. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಲು ಹೆದರಬಾರದು. ನಿರ್ದಾಕ್ಷಿಣ್ಯವಾಗಿ ನ್ಯಾಯಾಂಗ ವಿಚಾರಣೆ ನಡೆಸುವುದು ಅತ್ಯಗತ್ಯ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಇದರಿಂದ ಜನರಲ್ಲಿ ಉಂಟಾಗಿರತಕ್ಕ ಸಂಶಯ ನಿವಾರಣೆಯಾಗುತ್ತದೆ. ಈ ರೀತಿ ನ್ಯಾಯಾಂಗ ವಿಚಾರಣೆ ಮಾಡಿ ತಪ್ಪು ಮಾಡಿದವರಿಗೆ ಉಗ್ರ ಶಿಕ್ಷೆ ಮಾಡುವ ಕ್ರಮ ತೆಗೆದುಕೊಳ್ಳುವುದರಿಂದ ನಮ್ಮ ಮುಂದಿನ ಯೋಜನೆಗಳಿಗೆ ಅದರಿಂದ ಸಹಾಯವಾಗುತ್ತದೆ. ಅನ್ಯಾಯವಿದ್ದುದು ಹೊರಗೆ ಬರಬೇಕಾದುದು ಅಗತ್ಯ. ಆದುದರಿಂದ ನಮ್ಮ ಮುಖ್ಯಮಂತ್ರಿಗಳು ನ್ಯಾಯಾಂಗ ವಿಚಾರಣೆ ನಡೆಸಿ ದೇಶಕ್ಕೆ ಒಂದು ಮಾದರಿಯಾಗಿ ಮಾಡುತ್ತಾರೆಂದು ನಂಬಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಇದುವರೆಗೆ ಮಾತನಾಡಿದ ವಿರೋಧ ಪಕ್ಷದ ಪಕ್ಷದ ನಾಯಕರು ಶರಾವತಿ ಯೋಜನೆಯಲ್ಲಿ ಅನೇಕ ಅಚಾತುರ್ಯಗಳು ನಡೆದಿವೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ, ಕೆಲಸ ಸರಿಯಾಗಿ ನಡೆದಿಲ್ಲ ಎಂದು ಹೇಳಿದರು. ಆದರೆ ಸರಕಾರದವರು ಸಭೆಯ ಮುಂದೆ ಇಟ್ಟಿರುವ ಶ್ವೇತಪತ್ರವನ್ನು ನಾನು ಸ್ವಾಗತಿಸುತ್ತೇನೆ. ಶರಾವತಿ ಯೋಜನೆಯಲ್ಲಿ ನಡೆದಿರತಕ್ಕಂಥ ಎಲ್ಲ ವಿಷಯವನ್ನು ಪೂರ್ತಿಯಾಗಿ ತಿಳಿಸತಕ್ಕಂಥ ಈ ಶ್ವೇತಪತ್ರವನ್ನು ಸರಕಾರ ಪ್ರಕಟಪಡಿಸಿರುವುದಕ್ಕಾಗಿ ಸರಕಾರದವರನ್ನು ನಾನು ಅಭಿನಂದಿಸುತ್ತೇನೆ. ಈ ಸನ್ನಿವೇಶದಲ್ಲಿ ನನಗೆ ತಿಳಿದ ಒಂದೆರಡು ವಿಷಯಗಳ ಬಗ್ಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸ್ವಾಮಿ, ಪ್ರಕೃತಿಯ ಮಡಲಿನಲ್ಲಿ ಇರತಕ್ಕಂಥ ಶರಾವತಿ ಯೋಜನೆ ನಮ್ಮ ದೇಶಕ್ಕೆ ಬಹಳ ಪ್ರಾಮುಖ್ಯವಾಗಿದೆ. ಈ ಯೋಜನೆಯಲ್ಲಿ ತಯಾರಾಗತಕ್ಕಂಥ ವಿದ್ಯುತ್ ಶಕ್ತಿ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ ಸಹಾಯಕವಾಗುತ್ತದೆ. ಶರಾವತಿಗೆ ಹೋಗಿ ಇದನ್ನು ನೋಡಿದರೆ ಗೊತ್ತಾಗುತ್ತದೆ. ಈ ದೊಡ್ಡ ಯೋಜನೆಯ ಕಂಟ್ರಾಕ್ಟರರ ಕೆಲಸದಲ್ಲಿ ಕೆಲವು ಲೋಪದೋಷಗಳು ಇರಬಹುದು. ಅವರ ಕೆಲಸ ಸಮರ್ಪಕವಾಗಿಲ್ಲ ಎನ್ನತಕ್ಕಂಥ ಒಂದು ಸುಲಭವಾದ ಶೈಲಿಯಲ್ಲಿ ಮಾತನಾಡಬಹುದು. ಆದರೆ ಸರಿಯಾದ ರೀತಿಯಲ್ಲಿ ಕೆಲಸ ನಡೆದಿದೆ. ನಿಜವಾಗಿಯೂ ಅಲ್ಲಿ ನಡೆ

ದಿರತಕ್ಕಂಥ ಕೆಲಸ ನೋಡಿದರೆ ಗೊತ್ತಾಗುತ್ತದೆ. ಈ ಯೋಜನೆಯ ಕೆಲಸ ಸರಿಯಾಗಿ ನಡೆದಿರುವು ದರಿಂದಲೇ ಇಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗಿದೆ. ಅದಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ಎಂದು ಹೇಳುತ್ತಾರೆ. ಎಲ್ಲರೂ ಈ ಬಗ್ಗೆ ಹೆಚ್ಚು ಪ್ರೋತ್ಸಾಹ ಕೊಡತಕ್ಕದ್ದು ಸೂಕ್ತ ಎಂಬ ಮನೋಭಾವ ಹೊಂದಿದ್ದಾರೆ.

ಈ ಸಭೆಯ ನಮ್ಮ ಮಾನ್ಯ ಸ್ನೇಹಿತರುಗಳು ಸಹಿತ ಶರಾವತಿ ಕಣಿವೆಗೆ ಭೇಟಿ ಇತ್ತ ಕಾಲದಲ್ಲಿ ಅಲ್ಲಿ ಏನು ವಾತಾವರಣವಿದೆ ಅನ್ನುವುದನ್ನು ಖುದ್ದು ನೋಡಿದ್ದಾರೆ, ಅವರು ಅಲ್ಲಿ ಹೋದಾಗ ಒಂದು ನಿರ್ಜನ ಪ್ರದೇಶದಲ್ಲಿ ಒಂದು ಬೃಹದಾಕಾರದ ಯೋಜನೆ ಮಾಡಲು ಸಾಮಾನುಗಳನ್ನು ಯಾವ ಪರಿಸ್ಥಿತಿಯಲ್ಲಿ ತರುತ್ತಿದ್ದರು ಎಂದು ನೋಡಿದರು.

2 P. M.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾವು ಅದನ್ನು ವರ್ಣನೆ ಮಾಡಬೇಕಾಗಿಲ್ಲ, ಕವಿಗಳು. ಮಾಡುತ್ತಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ನಾನು ವರ್ಣಿಸುವುದು ಸಮಯೋಚಿತವಾಗಿದೆ. ಮಾನ್ಯ ಸದಸ್ಯರಿಗಿಂತಲೂ ನನಗೆ ಅಲ್ಲಿನ ಪರಿಸ್ಥಿತಿ, ತೊಂದರೆಗಳ ಸ್ವಂತ ಜ್ಞಾನವಿದೆ. ನಾನು ಆ ಪ್ರದೇಶದ ಪ್ರತಿನಿಧಿಯಾಗಿರುತ್ತೇನೆ. ವರ್ಷದಲ್ಲಿ 365 ದಿವಸವೂ ಅಲ್ಲಿಯೇ ಇದ್ದು ಅಲ್ಲಿ ನಡೆದಿರುವ ಕಾರ್ಯಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ಆದ್ದರಿಂದ ನಾನು ಹೇಳುವುದನ್ನು ಮಾನ್ಯ ಸದಸ್ಯರು ಸಾವಧಾನ ವಾಗಿ ಕೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಲ್ಲಿಗೆ ಮಾನ್ಯ ಸದಸ್ಯರುಗಳು ಹೋದಾಗ ಹೆಚ್ಚು ಮಟ್ಟದಲ್ಲಿ ಅಧಿಕಾರಿ ವರ್ಗದಲ್ಲಿ ಹಾಗೂ ಎಲ್ಲಾ ಲೆವಲನಲ್ಲಿ ಪ್ರತಿಯೊಂದರ ವಿಚಾರದಲ್ಲಿಯೂ ಚರ್ಚೆಗಳು ನಡೆದುವು. ಅಲ್ಲಿ ಆಗಿರತಕ್ಕಂಥ ಕಾರ್ಯ ಗಳ ಬಗ್ಗೆ ಎಲ್ಲರೂ ಪ್ರಶಂಸೆ ಮಾಡಿದರು. ಅವರು ಹಾಗೆ ಪ್ರಶಂಸೆ ಮಾಡಿದ್ದು ಅಲ್ಲಿ ಮಾಡಿದ ಸತ್ಕಾರ ಕ್ಕಾಗಿ ಎಂದು ಹೇಳಿದರೆ ಅದು ನಿಜವಾಗಿಯೂ ತಪ್ಪಾಗುತ್ತದೆ. ಯಾವುದೇ ಒಂದು 100ಕೋಟಿ ರೂಪಾಯಿನ ಯೋಜನೆಯಲ್ಲಿ, ಕೆಲಸ ಒಂದು ಮಟ್ಟದಲ್ಲಿ ಅತಿ ಜಾಗ್ರತೆಯಾಗಿ ಆಗಬೇಕು, ನಮ್ಮ ರಾಜ್ಯದಲ್ಲಿರುವ ವಿದ್ಯುಚ್ಛಕ್ತಿಯ ಕೊರತೆಯನ್ನು ಅತಿಶೀಘ್ರವಾಗಿ ಹೋಗಲಾಡಿಸಬೇಕು ಎಂದು ಬೃಹದಾಕಾರವಾಗಿ ಕೆಲಸ ನಡೆಸುತ್ತಿರುವಾಗ, ಸ್ವಲ್ಪ ಹೆಚ್ಚು ಖರ್ಚಾಗುವುದು ಸಹಜ. ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿ ಅಭಾವ ಹೋಗಲು, ಶರಾವತಿಯಂತಹ ಯೋಜನೆಗಳು ಜಾಗ್ರತೆಯಾಗಿ ಹೆಚ್ಚಾಗಿ ಆದದ್ದೇ ಆದರೆ, ನಮ್ಮ ಕೈಗಾರಿಕೆಗಳನ್ನು ಬೆಳಸಿಕೊಳ್ಳಲಿಕ್ಕೆ ಅವಕಾಶವಾಗುತ್ತದೆ ಎಂಬ ಒಂದು ದೊಡ್ಡ ಉದ್ದೇಶದಿಂದ, ಈ ಇಲ್ಲಿಯ ಕೆಲಸಕಾರ್ಯಗಳನ್ನು ನಡೆಸಿದೆ. ಅತಿ ಜಾಗ್ರತೆಯಾಗಿ ಕೆಲಸ ಪೂರೈಸಬೇಕೆಂದು ಭರಾಟೆಯಲ್ಲಿ ಕೆಲಸ ಮಾಡುತ್ತ ಇರುವ ಕಾಲದಲ್ಲಿ, ದೊಡ್ಡ ದೊಡ್ಡ ಕಾರ್ಯಗಳನ್ನು ನಿರ್ವಹಿಸಲು ಅನೇಕ ವೇಳೆ ಸರ್ಕಾರಕ್ಕೆ ಮೆಷಿನರಿ ಇಲ್ಲದ ಸನ್ನಿವೇಶ ಒದಗಿತು. ಆ ಮೆಷಿನರಿಗಳನ್ನು ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಂದ ತಂದು ಮಾಡಬೇಕಾಯಿತು, ಕೆಲಸ ನಿಲ್ಲಿ ಸುವ ಹಾಗಿರಲಿಲ್ಲ. ಸರಕಾರ ಹೆಚ್ಚಿನ ರೇಟುಗಳನ್ನು ಕೊಟ್ಟರು ಎಂಬ ಬಗ್ಗೆ ಶ್ವೇತಪತ್ರದಲ್ಲಿ ವಿವರ ಗಳನ್ನು ಕೊಟ್ಟಿದ್ದಾರೆ. 1959ರಲ್ಲಿದ್ದ ಸನ್ನಿವೇಶವೇ ಬೇರೆ. 1962ರ ಒಳಗೇ, ಅಲ್ಪಕಾಲದಲ್ಲಿಯೇ ಈ ಒಂದು ದೊಡ್ಡ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು, ಪೂರೈಸಬೇಕು, ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕು ಎಂಬ ಒಂದು ದೊಡ್ಡ ಉದ್ದೇಶದಿಂದ, ಈ ಎಲ್ಲಾ ಕೆಲಸಗಳನ್ನೂ ತೆಗೆದು ಕೊಂಡಿದ್ದಾರೆ. ಈ ಯೋಜನೆಯಲ್ಲಿ ಕೆಲಸ ಸರಿಯಾಗಿ ನಡೆದಿಲ್ಲ ಎಂದು ಇಲ್ಲಿ ವಾದಶೈಲಿಯಲ್ಲಿ ಹೇಳ ಬಹುದೇ ವಿನಹ, ಅಲ್ಲಿಯ ಭಾರಿ ಪ್ರಮಾಣದ ಕೆಲಸವನ್ನು ನೋಡಿದ್ದೇ ಆದರೆ, ಪರಿಶೀಲನೆ ಮಾಡಿದ್ದೇ ಆದರೆ, ಆತ್ಮ ಪೂರ್ವಕವಾಗಿ ಟೀಕೆ ಮಾಡುವುದಕ್ಕೆ ಅವಕಾಶವಿಲ್ಲ. ಇದನ್ನು ನಾನು ನನ್ನ ಅನುಭವ ದಿಂದ ಧೃಢವಾಗಿ ಹೇಳಬಲ್ಲೆ.

ಶ್ವೇತಪತ್ರದ ಮೊದಲನೆ ಪೇಜಿನಲ್ಲಿ ಹೀಗೆ ಹೇಳಿದ್ದಾರೆ.

This reservoir will have an impounding capacity of 156 MCFT, which is 1½ times the capacity of Thungabhadra Reservor, twice that of Bhadra Reservoir and 3½ times that of Krishnaraja Sagar Dam across the Cauvery........

ಈ ಪ್ರಾಜೆಕ್ಟಿಗೆ ಇವತ್ತು ಸರ್ಕಾರ ತೆಗೆದುಕೊಂಡಿರುವಂಥ ಕಾಲವೆಷ್ಟು; ಭದ್ರ, ತುಂಗಭದ್ರ ಇರಿಗೇಷನ್ ಪ್ರಾಜೆಕ್ಟಿಗೆ ತೆಗೆದುಕೊಂಡಿರುವಂಥ ಕಾಲವೆಷ್ಟು; ಆ ಪ್ರಾಜೆಕ್ಟುಗಳನ್ನು ಎಷ್ಟು ಕಾಲ ದಲ್ಲಿ ಮುಗಿಸಿದ್ದಾರೆ, ಅವಕ್ಕೆ ಎಷ್ಟು ಖರ್ಚಾಗಿದೆ, ಇದಕ್ಕೆ ಎಷ್ಟು ಕಾಲ ಹಿಡಿದಿದೆ, ಎಷ್ಟು ಖರ್ಚಾಗಿದೆ

(ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ)

ಎಂದು ನಮ್ಮ ಮಾನ್ಯ ಮಿತ್ರರು ಹೋಲಿಸಿ ಪರಿಶೀಲನೆ ಮಾಡಿದರೆ, ಈ ಬೃಹತ್ ಯೋಜನೆಗೆ ಸ್ವಲ್ಪ ಹೆಚ್ಚಿನ ಹಣ ಖರ್ಚಾಗುವುದು ಒಪ್ಪತಕ್ಕಂಥ ಮಾತು ಅನ್ನುವ ತೀರ್ಮಾನಕ್ಕೆ ಬರಬಹುದು. ಭದ್ರಾ ಪ್ರಾಜೆಕ್ಟಿನಲ್ಲಿ 35 ಕೋಟಿ ರೂಪಾಯಿ ಖರ್ಚಾಗಿದೆ; ಅದರಲ್ಲಿ ಆರೇಳು ವರ್ಷ ಕೆಲಸ ಆಗಿದೆ: ಆದರೂ ಅಂಥ ಒಂದು ಪ್ರಾಜೆಕ್ಟು ವಿಚಾರದಲ್ಲಿ ಆಕ್ಷೇಪಣೆ ಇಲ್ಲ. ಶರಾವತಿ ಪ್ರಾಜೆಕ್ಟಿನಲ್ಲಿ ಇಷ್ಟು ಕಷ್ಟಪಟ್ಟಿದ್ದರೂ ಇಂಜನಿಯರುಗಳು ಮತ್ತು ತಜ್ಞರುಗಳಿಂದ, ದೂರದೃಷ್ಟಿಯಿಂದ ಪ್ಲಾನು ಮಾಡಿಸಲಿಲ್ಲ, ಎಸ್ಟಿಮೇಟು ಮಾಡಿಸಲಿಲ್ಲ, ಮೊದಲೇ ವಿವರವಾದ ಸರಿಯಾದ ಯೋಜನೆ ತಯಾರಿಸಿ ಏಕೆ ಅಭಿಪ್ರಾಯದ ಬಗ್ಗೆ ಖಚಿತವಾದ ತೀರ್ಮಾನಕ್ಕೆ ಬರಲಿಲ್ಲ ಎಂದು ಈಗ ತಪ್ಪನ್ನು ಕಂಡುಹಿಡಿಯು ತಕ್ಕಂಥಾದ್ದು ಸುಲಭವಾದ ಮಾತು. ಅದು ಒಂದು ನಿರ್ಜನ ಪ್ರದೇಶ, ಅಂಥ ಕಡೆ ಒಂದು ಕಟ್ಟಡ ವಾಗಬೇಕಾದರೆ ಬೇರೆ ಯಾವ ಕೆಲಸವಾಗಬೇಕಾದರೂ ಯಾವ ಸನ್ನಿವೇಶವಿದೆ, ಎಷ್ಟು ಕಷ್ಟವಿದೆ. ಅಲ್ಪಕಾಲದಲ್ಲಿಯೇ ಗುರಿಸಾಧಿಸಬೇಕಾದರೆ ಎಷ್ಟು ಹಣ ಖರ್ಚಾಗುತ್ತದೆ ಅನ್ನುವುದನ್ನು ಟೀಕೆ ಮಾಡುವವರು ಮನವಟ್ಟು ಮಾಡಿಕೊಳ್ಳಬೇಕು. ಶರಾವತಿಯಂತಹ ಬೃಹತ್ ಯೋಜನೆಯನ್ನು ಅಲ್ಪ ಕಾಲದಲ್ಲಿ ಮಾಡುವಾಗ ಹಣ ಹೆಚ್ಚು ಖರ್ಚಾದರೆ ಅದನ್ನು ದುರ್ವ್ಯವಹಾರ ಎಂದು ಹೇಳುವು ದಕ್ಕೆ ಬರುವುದಿಲ್ಲ. ಅಲ್ಲಿಯ ಇಂಜನಿಯರುಗಳೂ ಹಾಗೂ ಕಂಟ್ರ್ಯಾಕ್ಟರುಗಳು ದುವ್ಯಾಪಾರ ಹಣ ಕೊಳ್ಳೆ ಹೊಡೆದಿದ್ದಾರೆ ಎಂಬ ಮಾತು ಸರಿಯಿಲ್ಲ. ಶ್ರೀಮಾನ್ ಶಿವಪ್ಪನವರು ತಮ್ಮ ಭಾಷಣ ದಲ್ಲಿ, ಶ್ರೀ ರಾಯಚೂರ್ ಎಂಬ ಇಂಜನಿಯರು ಇಲಾಖೆಯನ್ನು ಬಿಟ್ಟು ಕಂಟ್ರ್ಯಾಕ್ಟರ ಕಡೆಗೆ ಹೋದರು ಎಂದು ಹೇಳಿದರು. ಈ ಅಪಾದನೆ ಸರಿಯಿಲ್ಲ. ಯಾವ ಇಂಜನಿಯರೇ ಆಗಲಿ, ಶೇರು ಸಿಗುವ ಹಾಗಿದ್ದರೆ, ದ್ವಿಗುಣ ಲಾಭವಾಗುವ ಸನ್ನಿವೇಶ ಬಿಟ್ಟು, ಏತಕೆ ಕಂಟ್ರ್ಯಾಕ್ಟರ ಹತ್ತಿರ ಹೋಗಿ ಸೇರಿಕೊಳ್ಳುತ್ತಾರೆ. ಅವರು ಸರ್ಕಾರಿ ನೌಕರಿಯಲ್ಲಿಯೇ ಇದ್ದು, ಹೆಚ್ಚಿನ ಒಂದು ರೇಟಿನ ಅವ ಕಾಶ ಕಂಟ್ರ್ಯಾಕ್ಟರಿಗೆ ಮಾಡಿಕೊಟ್ಟು ಅದರಲ್ಲಿ ಪಾಲುದಾರರಾಗಿಯೇ ಉಳಿಯುತ್ತಿದ್ದರು; ಅವರು ಕೆಲಸ ಬಿಟ್ಟಿದ್ದರಿಂದಲೇ ಇಂಥ ವ್ಯವಹಾರಕ್ಕೆ ಕೈ ಹಾಕಿಲ್ಲವೆಂದು ವ್ಯಕ್ತವಾಗುತ್ತದೆ. ಕಂಟ್ರ್ಯಾ ಕ್ಟರುಗಳಿಗೆ ಹೆಚ್ಚು ಹಣ ಸಂದಾಯವಾಗಿವೆ, ಭಾರಿ ಹಣ ಖರ್ಚಾಗಿದೆ ಅಂದ ಮಾತ್ರಕ್ಕೆ, ಅಥವ ಅದೊಂದು ಕಾರಣದಿಂದಲೇ ದುರ್ವ್ಯವಹಾರವಾಗುವದಿಲ್ಲ. ಶರಾವತಿಗೆ ಹೋಗಿ ಕೆಲಸ ನೋಡಿದರೆ ಅಲ್ಲಿಯ ವ್ಯವಹಾರಗಳಲ್ಲಿ ಅನ್ಯಾಯ ನಡೆದಿರಲಿಕ್ಕೆ ಸಾಧ್ಯವಿಲ್ಲ ಅನ್ನುವುದು ಸ್ಪಷ್ಟವಾಗುತ್ತದೆ. ಕೆಲಸ ವೇಗವಾಗಿಸಬೇಕು, ವಿದ್ಯುಚ್ಛಕ್ತಿ ಬೇಗ ಉತ್ಪಾದನೆಯಾಗಬೇಕು, ನಾವು ಹಾಕಿರತಕ್ಕಂಥ ಬಂಡ ವಾಳಕ್ಕೆ ಸರಿಯಾದ ಪ್ರತಿಫಲ ಶೀಘ್ರವಾಗಿ ಬರಬೇಕು ಅನ್ನುವುದೇ ಒಂದು ಉದ್ದೇಶ ಹೊರತು, ಇನ್ನಾವುದೂ ಇಲ್ಲ. ಈ ಒಂದು ಘನ ಉದ್ದೇಶದಿಂದ ಕಂಟ್ರ್ಯಾಕ್ಟರುಗಳಿಗೆ ಒಮ್ಮೊಮ್ಮೆ ಸಂದರ್ಭದಲ್ಲಿ ಹೆಚ್ಚಿನ ದರಗಳನ್ನು ಕೊಟ್ಟಿದ್ದರೆ, ಅದು ದುರ್ವ್ಯವಹಾರ ಅನ್ನುವುದು ಒಪ್ಪತಕ್ಕದ್ದಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಿಮ್ಮ ಅಂಗಡಿಯಲ್ಲಿ 80 ರೂಪಾಯಿ ಸಾಮಾನನ್ನು 60 ರೂಪಾಯಿಗೆ ಕೇಳಿದರೆ ಜಲ್ದಿ ಕೊಟ್ಟುಬಿಡುತ್ತೀರೋ ?

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಅಂಥ ಸಣ್ಣ ಪುಟ್ಟ ವ್ಯವಹಾರಗಳು ನಡೆಯುವುದಕ್ಕೆ ಅವ ಕಾಶವಾಗಿಲ್ಲ, ಅಂಥ ಸನ್ನಿವೇಶ ನಡೆದಿಲ್ಲ. ಇದು ಒಂದು ದೊಡ್ಡ ಯೋಜನೆ ಅದರಲ್ಲಿ ಜಾಗ್ರತೆಯಾಗಿ ಆಗಲಿ ಎಂಬ ಒಂದೇ ಸದುದ್ದೇಶದಿಂದ, ಒಳ್ಳೆಯ ರೀತಿಯಲ್ಲಿ ಕೆಲಸವಾಗಬೇಕು ಎಂಬ ಅಭಿಲಾಷೆ ಯಿಂದ ಕೆಲಸ ತೆಗೆದುಕೊಂಡಿದೆ ಅನ್ನುವುದನ್ನು ಅವರು ಮರೆಯಬಾರದು.

ಶರಾವತಿ ಯೋಜನೆಯ ಮುಳುಗಡೆ ಪ್ರದೇಶದ ಜನಗಳು ಬಹಳ ತ್ಯಾಗ ಮಾಡಿದ್ದಾರೆ. ಅವರ ಪುನರ್ವಸತಿ ವಿಚಾರದಲ್ಲಿ ಒಂದೆರಡು ಮಾತು ಹೇಳಬೇಕಾಗಿದೆ. ಅವರ ಪುನರ್ವಸತಿ ಬಗ್ಗೆ ಸರ್ಕಾರ 15 ಲಕ್ಷದಿಂದ 50 ಲಕ್ಷದವರೆಗೆ ಒಂದು ಹೆಚ್ಚು ಖರ್ಚು ಮಾಡಬೇಕಾಯಿತು ಎಂದು ಹೇಳಿದರು.

ಇವುಗಳೆಲ್ಲ ವಿಷಯದಲ್ಲೂ ಸಹ ಸರ್ಕಾರದವರು ಒಂದು ಸರಿಯಾದ ತೀರ್ಮಾನವನ್ನು ಮಾಡಿ ಸುವ್ಯವಸ್ಥಿತವಾದ ರೀತಿಯಲ್ಲಿ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಶ್ರಮ ವಹಿಸಿದ್ದಾರೆ. ಆದರೂ ಕೂಡ ಇನ್ನೂ ಹೆಚ್ಚಿನ ಮಟ್ಟದಲ್ಲಿ ಅನುಕೂಲ ಇನ್ನೂ ಆಗದೇ ಇರುವುದರಿಂದ ಈ ಸಭೆಯ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಪುನಃ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಅನೇಕ ಸಾರಿ ಅವರ ಬಗ್ಗೆ ಬಹಳ ಸಹಾನುಭೂತಿಯಿಂದ ಕೆಲಸ ಮಾಡುತ್ತೇವೆ ಎಂದು ಹೇಳಿದ್ದರೂ ಕೂಡ ಕೆಲವು ತೊಡಕುಗಳು ಇನ್ನೂ ಬಗೆಹರಿಯದೇ ಹಾಗೆಯೇ ಇವೆ ; ಆದ್ದರಿಂದ ಅವನ್ನು ಪರಿಶೀಲನೆ ಮಾಡಿ ಪ್ರಕೃತಿಯ ಒಂದು ಮಾರ್ಪಾಡಿಗೆ ಒಳಗಾಗಿರತಕ್ಕ ಜನರಿಗೆ ಸೂಕ್ತವಾದ ಪರಿಹಾರವನ್ನು ಒದಗಿಸಬೇಕೆಂದು ಹೇಳು ತ್ತೇನೆ. ಲಿಂಗನಮಕ್ಕಿಯಲ್ಲಿ ಬ್ಯಾಕ್ ವಾಟರ್ಸ್ ಇರತಕ್ಕ ಪ್ರದೇಶದಲ್ಲಿರತಕ್ಕ ಜನರಿಗೆ ತುಂಬಾ ತೊಂದರೆಯಾಗಿದೆ. ಅವರನ್ನು ಬೇರೆ ಕಡೆಗಳಿಗೆ ಕಳುಹಿಸದೇ ಅಲ್ಲಿಯೇ ಆ ಜನರು ನೆಲೆಸುವಂತೆ ಮಾಡಲು ಬೇಕಾದ ಕೆಲಸಗಳನ್ನು ಮಾಡಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಕೇಳಿ

ಕೊಳ್ಳುತ್ತೇನೆ. ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವಿಲ್ಲದಂತಾಗಿದೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಮತ್ತೆ ಪುನಃ ಇದನ್ನು ಜ್ಞಾಪಕ ಮಾಡಬೇಕಾಗಿದೆ. ಲಿಂಗನಮಕ್ಕಿಯಲ್ಲಿ ಬಹಳ ಅಚಾತುರ್ಯವಾಗಿದೆ, ನೀರಿನ ಪಕ್ಕದಲ್ಲೇ ಜನರು ವಾಸ ಮಾಡುತ್ತಾ ಇದ್ದಾರೆ ಅವರಿಗೆ ಸರಿಯಾದ ರಸ್ತೆಗಳು ಇಲ್ಲ, ವಾಸಕ್ಕೆ ಮನೆಯ ಅನುಕೂಲ ಇಲ್ಲ, ಅವರ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಸರಿಯಾದ ಆಸ್ಪತ್ರೆಗಳು ಇಲ್ಲ, ಮೊದಲು ಹಿರೇ ಭಾಸ್ಕರ ಡ್ಯಾಂ ಕಟ್ಟುವಾಗ ಅಲ್ಲಿ ಆಸ್ಪತ್ರೆ ಇತ್ತು, ಅದನ್ನು ಬ್ಯಾಕ್ ವಾಟರ್ಸ್ ಬರತಕ್ಕ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ಹೇಳಿದ್ದೆವು. ಅದನ್ನೂ ಕೂಡ ಇನ್ನೂ ಮಾಡಿಲ್ಲ, ಎಷ್ಟೇ ಖರ್ಚಾದರೂ ಕೂಡ ಅದನ್ನು ಮಾಡಲೇಬೇಕು. ಮೊದಲು 25 ಮೈಲಿ ದೂರದಲ್ಲಿದ್ದ ಪ್ರದೇಶವನ್ನು ಈಗ 130 ಮೈಲಿ ದೂರ ಪ್ರಯಾಣ ಮಾಡಿ ತಲುಪಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನೀರು ಮುಳುಗಡೆಯಾಗಿ ಅಲ್ಲಿ ವಾಸವಾಗಿದ್ದ ಜನರಿಗೆ ಆಗಿರತಕ್ಕ ಕಷ್ಟ ಪರಂಪರೆಯನ್ನು ಹೇಳತೀರದಾಗಿದೆ. ಶರಾವತಿ ಕಣಿವೆ ಎಲ್ಲರಿಗೂ ಉಪಯೋಗವಾಗತಕ್ಕ ಕಣಿವೆ ಆದ್ದರಿಂದ ಅಲ್ಲಿ ವಾಸಮಾಡತಕ್ಕ ಜನರಿಗೆ ಒದಗಿಸಿ ಕೊಡಬೇಕಾದ ಸೌಕರ್ಯಗಳನ್ನು ಆದಷ್ಟು ಜಾಗ್ರತೆ ಪೂರೈಸಬೇಕಾದ್ದು ತಮ್ಮ ಕರ್ತವ್ಯವಾಗಿದೆ. ಪುನರ್ ವಸತಿ ಕಾರ್ಯಕ್ರಮವನ್ನು ಎಷ್ಟೇ ಸಮರ್ಪಕವಾಗಿ ಮಾಡಿದ್ದೀರಿ ಎಂದು ಹೇಳಿ ಸಮಾಧಾನ ಪಟ್ಟುಕೊಳುವುದಕ್ಕೆ ಪ್ರಯತ್ನ ಪಟ್ಟರೂ ಕೂಡ ಅಲ್ಲಿರತಕ್ಕ ಸನ್ನಿವೇಶವನ್ನು ನೋಡಿದರೆ ಮನಸ್ಸಿಗೆ ಬಹಳ ದುಃಖವನ್ನುಂಟು ಮಾಡುತ್ತದೆ. ಅನೇಕರು ಯಾವ ಕಾಲದಲ್ಲಿ ಸರ್ಕಾರದವರನ್ನು ಕೇಳಿ ಪರಿಹಾರವನ್ನು ಪಡೆಯಬೇಕಾಗಿತ್ತೋ ಆ ಕಾಲದಲ್ಲಿ ಪಡೆಯದೇ ಕಾಲವನ್ನು ಕಳೆದುಕೊಂಡು ಅವರು ಕಷ್ಟಕ್ಕೆ ತುತ್ತಾಗಿದ್ದಾರೆ. ಹಿರೇ ಭಾಸ್ಕರ ಡ್ಯಾಂ ಕಟ್ಟುವಾಗ ಕಂಡೀಷನಲ್ ಗ್ರಾಂಟು ಎಂದು ಹೇಳಿ ಅನೇಕರಿಗೆ ಮಂಜೂರು ಮಾಡಿದ ಪರಿಹಾರದಲ್ಲಿ ಜಮೀನು ಕೊಟ್ಟಿದ್ದರು, ಈಗ ಆ ಜಮೀನು ಹೋಗತಕ್ಕ ಸನ್ನಿವೇಶದಲ್ಲಿ ಇದೆ. ಹಿಂದೆ ಯಾವ ಪರಿಹಾರವಾಗಿ ಜಮೀನು ಸಿಕ್ಕಿತ್ತೋ ಅದು ಈಗ ಸಿಕ್ಕುತ್ತಾ ಇಲ್ಲ. ಹೀಗಿರುವುದರಿಂದ ಅವರು ಬಹಳ ಅನಾಥರಾಗುತ್ತಾ ಇದ್ದಾರೆ. ಅವರು ಬಹಳ ಕಷ್ಟಕ್ಕೆ ಈಡಾಗುತ್ತಾ ಇದ್ದಾರೆ, ಅವರ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಅನೇಕ ಸಾರಿ ತಮ್ಮ ಗಮನಕ್ಕೆ ತಂದಿದ್ದೇನೆ.

ಕೆಲವು ಕಡೆ ಅರ್ಧ ಜಮೀನು ಮುಳುಗಡೆಯಾಗಿ ಇನ್ನರ್ಧ ಜಮೀನು ಹಾಗೆಯೇ ಇದೆ; ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದೇ ಇರುವುದರಿಂದ ಅಧಿಕಾರಿಗಳು ಅದನ್ನು ಗಮನಕ್ಕೆ ತೆಗೆದುಕೊಳ್ಳದೇ ಹಾಗೆಯೇ ಬಿಟ್ಟಿದ್ದಾರೆ. ಅವರು ಅಲ್ಲೇ ಇರಬೇಕೆಂದು ಹೇಳುತ್ತಾ ಇದ್ದಾರೆ. ಇದರಲ್ಲಿ ಅವರ ತಪ್ಪು ಏನಿದೆಯೋ ಗೊತ್ತಾಗುವುದಿಲ್ಲ. ಹಿಂದೆ ಒಂದು ಕಾಲದಲ್ಲಿ ತಮ್ಮ ಮನೆಗಳು ಮತ್ತು ಜಮೀನುಗಳನ್ನು ಇಟ್ಟುಕೊಂಡು ವಾಸವಾಗಿದ್ದ ಜನರಿಗೆ ಇವತ್ತು ಅರ್ಧಭಾಗ ಕಿತ್ತುಕೊಂಡು ಇನ್ನರ್ಧ ಭಾಗದಲ್ಲಿ ಅವರು ಅಲ್ಲೇ ವಾಸಮಾಡಬೇಕೆಂದರೆ ಅವರ ಪಾಡೇನು ಎಂಬುದನ್ನು ತಾವು ಯೋಚನೆ ಮಾಡಬೇಕು. ಆದ್ದರಿಂದ ಇನ್ನೂ 15—20 ಲಕ್ಷ ರೂಪಾಯಿ ಜಾಸ್ತಿ ಪರಿಹಾರ ಕೊಡಬೇಕಾಗಿ ಬಂದರೂ ಕೂಡ ಅದನ್ನು ಗಮನಿಸದೆ ಇವತ್ತು ಬಹಳ ಕಷ್ಟದಲ್ಲಿ ಇರತಕ್ಕ ಆ ಜನರಿಗೆ ಸೂಕ್ತವಾದ ಪರಿಹಾರವನ್ನು ಒದಗಿಸಬೇಕೆಂದು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಮುಖ್ಯ ಮಂತ್ರಿಗಳವರಿಗೆ ಹೇಳುತ್ತೇನೆ. ಇಷ್ಟು ಹೇಳಿ ಸರ್ಕಾರದ ಧ್ಯೇಯ ಧೋರಣೆಗಳು, ಯಾವ ರೀತಿ ಕೆಲಸವಾಗಿದೆ ಎಂಬುದನ್ನು ಈ ಶ್ವೇತಪತ್ರದಲ್ಲಿ ಬಹಳ ಚೆನ್ನಾಗಿ ತೋರಿಸಿರುವುದಕ್ಕಾಗಿ ಸರ್ಕಾರದವರನ್ನು ಅಭಿನಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **Sri G. V. GOWDA** (Palya).—Mr. Speaker, Sir, I glad that the Hon'ble Chief Minister has allowed a discussion on the White Paper presented to this House on 2nd March 1964. I am equally glad Sir, that the Leader of the Opposition has made out a *prima facie* case that there is need for further probing into the affairs of the Sharavathi. Sir, this White Paper does not disclose all the necessary details leading to the so-called Sharavathi Deal, nor is it complete in all aspects. In my opinion, necessary particulars, particulars that are material and vital for a fair appreciation of the entire aspects have not been incorporated in the White Paper. Sir, it was originally contemplated that the Department of Public Works to the Government of Mysore had to undertake the execution of the entire scheme of the Works in the Sharavathi Valley

(SRI G. V. GOWDA)

Hydro-Electric Project and with that object in view they have purchased machinery worth about Rs. 26 lakhs and for reasons best known to the Government, then it was decided that major contractors had to be entrusted with respect to the execution of these works. Out of the machinery purchased, worth Rs. 26 lakhs, only machinery worth Rs. 10 lakhs was put into use and the remaining machinery worth Rs. 16 lakhs was not put into use on the ground that they were not in serviceable condition. I do not understand why the machinery which were not capable of being made use of were purchased to the extent of Rs. 16 lakhs and they were lying idle for the last three to four years and in fact that aspect has not been touched upon in the White Paper. So far as other materials are concerned, I now come to the change of the masonry dam into earthen dam and all these complications have arisen since a decision to substitute the masonry dam by means of earthen dam has been taken by the Government. Sir, in December 1959 that decision was taken and in January the contractor to whom the original work was entrusted, that is, Messrs. Tarapore & Co., were asked to take up that work and execute because under clauses 27 and 28, if that particular work is altered or substituted by another work, the contractor who has been doing that work has to be preferred and accordingly he has been asked to take up the work. But that clause also further says that the Chief Engineer, in accordance with the formula indicated therein, has got to determine the rates at which the substitute work has to be undertaken. I would read the paragraph for the information of this House.

> "The contract provided that the firm may be ordered to execute any substituted work as a result of change in design, the rates thereof being determined as follows :—
>
> "......The price for such items shall be determined by the Engineer on the basis of the prices quoted by the contractor in the schedule of prices for similar comparable items of work and if no such comparable item be found, then by reference to the schedule of rates prevailing in the area of the works, and if no such item be found in the schedule of rates also, then by estimating the fair price from data available or collected by the Engineer in respect of such work."

So, when a decision is taken to change the masonry dam into earthen dam, the only course open to the Chief Engineer was to entrust the work to the original contractor and determine the rates according to the formula. No doubt, the contract or has been asked to take up the work. The Chief Engineer has to determine the rates. The question of acceptance of rates by the Chief Engineer or Government would not have arisen in these matters. In all original works, when tenders are called for, necessarily they have got to be accepted by Government. In substitute work, there is clause 27 and clause 28, a

